# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA






ಸಂಪುಟ:01 • ಸಂಚಿಕೆ:223 • ನೋಂದಣಿ ನಂ.:KARKAN27911 • ವಿಜಯನಗರ • 30.01.2024 • ಮಂಗಳವಾರ • ಪುಟ:04 • ಬೆಲೆ:2
Volume:01 • Issue:223 • Reg.No:KARKAN27911 • VIJAYANAGARA • 30.01.2024 • Tuesday • Page:04 • Rs:2


**ಮೈಕ್ರೋ ನ್ಯೂಸ್**

## ಫೆ.1ರಂದು ಬೈಕ್ ರ್‍ಯಾಲಿ

**ಹಂಪಿ ಟೈಮ್ಸ್ ಹೊಸಪೇಟೆ**
ಫೆ.2ರಿಂದ ಫೆ.4ರವರೆಗೆ ನಡೆಯುವ ಹಂಪಿ ಉತ್ಸವದ ಅಂಗವಾಗಿ ಫೆ.01ರಂದು ಬೆಳಿಗ್ಗೆ 8 ಗಂಟೆಗೆ ಹೊಸಪೇಟೆಯ ಜಿಲ್ಲಾಧಿಕಾರಿಗಳ ಕಚೇರಿಯಿಂದ ಬೈಕ್ ರ್‍ಯಾಲಿ ಏರ್ಪಡಿಸಲಾಗಿದೆ. ಈ ರ್‍ಯಾಲಿಯಲ್ಲಿ ಭಾಗವಹಿಸಲು ಜನವರಿ 31ರೊಳಗೆ ಜಿಲ್ಲಾಧಿಕಾರಿಗಳ ಕಚೇರಿಯ ಸಿಬ್ಬಂದಿ ಬಸವರಾಜ ಅವರನ್ನು ಸಂಪರ್ಕಿಸಿ ಹೆಸರು ನೋಂದಾಯಿಸಬೇಕು.ಈ ರ್‍ಯಾಲಿ ಯಲ್ಲಿ ಭಾಗವಹಿಸುವವರು ಆಧಾರ್ ಕಾರ್ಡ್, ಡಿ.ಎಲ್ ಹೆಲ್ಮೇಟ್ ಮತ್ತು ಸ್ವಂತ ದ್ವಿಚಕ್ರ ವಾಹನ ಹೊಂದಿರಬೇಕು ಎಂದು ತಿಳಿಸಿದೆ.

## ಜ.31ರಂದು ವರಕವಿ ದ.ರಾ ಬೇಂದ್ರೆರವರ 128ನೇ ಜನ್ಮ ದಿನಾಚರಣೆ

**ಹಂಪಿ ಟೈಮ್ಸ್ ಹೊಸಪೇಟೆ**
ವಿಜಯನಗರ ಸಾಹಿತ್ಯ ಪರಿಷತ್ತು, ಜಿಲ್ಲಾಘಟಕ ಹಾಗೂ ಚೇತನ ಸಾಹಿತ್ಯ ಸಂಸ್ಥೆ ಸಹಯೋಗದಲ್ಲಿ ಜ.31ರಂದುಬೆಳಿಗ್ಗೆ 10 ಗಂಟೆಗೆ ವರಕವಿ ದ.ರಾ ಬೇಂದ್ರೆಯವರ 128ನೇ ಜನ್ಮ ದಿನಾಚರಣೆಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
ಕಿರ್ಲೋಸ್ಕರ್ ಲೇಡೀಸ್‌ಕ್ಲಬ್‌ನ ಅಧ್ಯಕ್ಷೆ ಕಮಲಾ ಗುಮಾಸ್ತೆ ಉದ್ಘಾಟಿಸಲಿದ್ದು, ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಜಿ.ಭರಮಲಿಂಗನಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಬೇಂದ್ರೆಯವರ ಆಯ್ದ ಕವನಗಳ ವಿಶ್ಲೇಷಣೆ ಕುರಿತು ಹಂಪಿ ಕನ್ನಡ ವಿವಿ ಸಹಾಯಕ ಕುಲಸಚಿವ ಎಂ.ಎಂ.ಶಿವಪ್ರಕಾಶ ಉಪನ್ಯಾಸ ನೀಡಲಿದ್ದಾರೆ. ಲೇಖಕರಾದ ಬಸವರಾಜ ವಿ.ಎಸ್. ಇವರ ರಚನೆಯ ಅಂತರಂಗದ ಚಿಂತನೆಗಳು ಕೃತಿಯನ್ನು ಕಾಲೇಜಿನ ಕಾರ್ಯದರ್ಶಿ ಅಶೋಕ್‌ಜೀರೆ ಬಿಡುಗಡೆ ಮಾಡಲಿದ್ದಾರೆ. ಮತ್ತು ಚೇತನ ಸಾಹಿತ್ಯ ಸಂಸ್ಥೆ ಅಧ್ಯಕ್ಷ ಜಂಬುನಾಥ ಹೆಚ್.ಎಂ.ಕೃತಿ ಪರಿಚಯಿಸಲಿದ್ದಾರೆ.

ಮೈಮೇಲೆ ಹರಿದ ಬಟ್ಟೆ
ಇದ್ದರೂ ಚಿಂತೆಯಿಲ್ಲ.
ಕೈಯಲ್ಲೊಂದು
ಕನ್ನಡ ಪತ್ರಿಕೆ ಇರಲಿ.
ಡಿ.ವಿ.ಜಿ.

# ಕೋಮುಸೌಹಾರ್ದ ಹದಗೆಡಿಸಿದ ಸರ್ಕಾರ

### ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್, ಯುವ ಮುಖಂಡ ಸಿದ್ದಾರ್ಥಸಿಂಗ್ ಆಕ್ರೋಶ | ಸಿಎಂ ಸಿದ್ದರಾಮಯ್ಯ ಜನರ ಕ್ಷಮೇ ಕೇಳಲಿ

### ರಾಜ್ಯ ಸರ್ಕಾರದ ಹಿಂದೂ ವಿರೋಧಿ ನೀತಿ ಮತ್ತು ಕೆರೆಗೋಡು ಘಟನೆ ಖಂಡಿಸಿ ಪ್ರತಿಭಟನೆ, ಹನುಮ ಧ್ವಜ ಮತ್ತೆ ಹಾರಿಸಲು ಆಗ್ರಹ

**■ ಹಂಪಿ ಟೈಮ್ಸ್ ಹೊಸಪೇಟೆ**
ಮಂಡ್ಯ ಜಿಲ್ಲೆಯ ಕೆರೆಗೋಡು ಗ್ರಾಮದಲ್ಲಿ ಅಲ್ಲಿನ ರಾಮಭಕ್ತರು ಅಳವಡಿಸಿದ್ದ ಹನುಮ ಧ್ವಜವನ್ನು ಇಳಿಸಿದ ರಾಜ್ಯ ಸರ್ಕಾರದ ಹಿಂದೂ ವಿರೋಧೀ ನೀತಿ ಖಂಡನೀಯ. ಸರ್ಕಾರದ ನಡೆ ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದ ಗ್ರಾಮದ ಸಾರ್ವಜನಿಕರ ಮೇಲೆ ಲಾಠಿಚಾರ್ಜ್ ನಡೆಸಿದ ಪೊಲೀಸರ ಕ್ರಮ ಅಕ್ಷಮ್ಯವಾದದ್ದು. ಕೂಡಲೇ ಈ ಸರ್ಕಾರ ಗ್ರಾಮದ ಹಾಗೂ ರಾಜ್ಯದ ಸಮಸ್ತ ಹಿಂದೂಗಳ ಕ್ಷಮೆ ಕೇಳಬೇಕು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಆಗ್ರಹಿಸಿದರು.

ಕೆರೆಗೋಡು ಗ್ರಾಮದಲ್ಲಿ ನಡೆದ ಹಿಂದೂ ವಿರೋಧಿ ಕ್ರಮವನ್ನು ಖಂಡಿಸಿ ಬಿಜೆಪಿ ಜಿಲ್ಲಾ ಘಟಕದ ವತಿಯಿಂದ ಸೋಮವಾರ ಬೆಳಗ್ಗೆ ಜಿಲ್ಲಾಧಿಕಾರಿ ಕಚೇರಿ ಬಳಿ ಹಮ್ಮಿಕೊಂಡಿದ್ದ ಪ್ರತಿಭಟನೆಯ ನೇತೃತ್ವವಹಿಸಿ ಮಾತನಾಡಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ಅದರಲ್ಲೂ ಸಿದ್ದರಾಮಯ್ಯ ಅವರು ಪದೇ ಪದೇ ಹಿಂದೂ ವಿರೋಧಿ ನೀತಿ ಅನುಸರಿಸುತ್ತಲೇ ಇದ್ದಾರೆ. ಹಿಂದೂಗಳು ಹಾಗೂ ರಾಮಭಕ್ತರನ್ನು ಕಂಡರೆ ಅವರಿಗೆ ಯಾಕೆ ಸಹಿಸಲು ಆಗುತ್ತಿಲ್ಲ ಎನ್ನುವುದು ತಿಳಿಯುತ್ತಿಲ್ಲ. ರಾಜ್ಯದಲ್ಲಿ ಶಾಂತಿಯುತ



ವಾತಾವರಣ ನೆಲೆಸಿರುವಾಗ ರಾಜ್ಯ ಸರ್ಕಾರ ಕೋಮುಭಾವನೆ ಕೆರಳಿಸುವಂತ ಕೆಲಸ ಮಾಡಿದೆ. ಹಿಂದೂಗಳನ್ನು ದಮನಿಸುವ ಸಲುವಾಗಿ ಆಡಳಿತ ಯಂತ್ರವನ್ನು ದುರ್ಬಳಕೆ ಮಾಡಿಕೊಂಡಿದೆ. ಬಿಜೆಪಿ ಇದನ್ನು ಉಗ್ರವಾಗಿ ಖಂಡಿಸುತ್ತದೆ. ಸರ್ಕಾರ ತನ್ನ ಧೋರಣೆಯನ್ನು ಬದಲಿಸದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ಮುಂದುವರೆಸಲಿದೆ ಎಂದು ಎಚ್ಚರಿಸಿದರು.

ಯುವ ಮುಖಂಡ ಸಿದ್ಧಾರ್ಥ ಸಿಂಗ್ ಮಾತನಾಡಿ, ಅಧಿಕಾರದ ಮದದಲ್ಲಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಹಿಂದೂಗಳ ಭಾವನೆಗಳನ್ನು ಹತ್ತಿಕ್ಕಲು ಯತ್ನಿಸುತ್ತಿದೆ. ಸಮಾಜದಲ್ಲಿ ಸಾಮರಸ್ಯದ ಬದಲಿಗೆ ಅಶಾಂತಿ ಉಂಟು ಮಾಡಲು ಮುಂದಾಗಿದೆ. ಶಾಂತಿಯಿಂದ ಇರುವ ರಾಜ್ಯದಲ್ಲಿ ಕೋಮುಸೌಹಾರ್ದ ಹದಗೆಡಿಸಿ ಅಶಾಂತಿ ಉಂಟು ಮಾಡಿ ಜನರ ಮಧ್ಯೆ ಬಿರುಕು ತಂದಿಡುವ ಕಾರ್ಯ ನಿಲ್ಲಿಸಬೇಕು. ಇಲ್ಲವಾದರೆ ಬರುವ ದಿನಗಳಲ್ಲಿ ರಾಜ್ಯದ ಜನರೇ ಈ ಸರ್ಕಾರಕ್ಕೆ ತಕ್ಕ ಉತ್ತರ ನೀಡಲಿದ್ದಾರೆ ಎಂದು ಹೇಳಿದರು.

ದೇಶದ ಇತಿಹಾಸದಲ್ಲಿ ರಾಷ್ಟ್ರಧ್ವಜವನ್ನು ಮಧ್ಯಾಹ್ನ 3 ಗಂಟೆಗೆ ಹಾರೋಹಣ ಮಾಡಿದ ಉದಾಹರಣೆ ಇಲ್ಲ. ಈ ಸರ್ಕಾರ ಆ ಕೆಲಸವನ್ನೂ ಮಾಡುವ ಮೂಲಕ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದೆ. ರಾಜ್ಯ ಸರ್ಕಾರ ಒಂದು ಧರ್ಮದ ಪರವಾಗಿ ತುಷ್ಟೀಕರಣ ನೀತಿ ಅನುಸರಿಸುತ್ತಿದೆ. ಹಿಂದೂಗಳಿಂದ ಮತ ಪಡೆದು ಇದೀಗ ಹಿಂದೂ ವಿರೋಧಿ ನೀತಿ ಅನುಸರಿಸುವುದು ತರವಲ್ಲ. ಕೂಡಲೇ ಕೆರೆಗೋಡು ಗ್ರಾಮದಲ್ಲಿ ಪುನಃ ಹನುಮ ಧ್ವಜ ಹಾರಿಸಬೇಕು. ಈ ಮೂಲಕ ರಾಜ್ಯ ಸರ್ಕಾರ ಹಿಂದೂ ಸಮಾಜಕ್ಕೆ ಗೌರವ ಕೊಡಬೇಕು ಎನ್ನುವ ಮನವಿಯನ್ನು ಜಿಲ್ಲಾಧಿಕಾರಿ ಮೂಲಕ ರಾಜ್ಯಪಾಲರಿಗೆ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಬಳ್ಳಾರಿ ವಿಭಾಗ ಸಂಘಟನಾ ಕಾರ್ಯದರ್ಶಿ ಪೂಜಪ್ಪ, ಜಿಲ್ಲಾ ಮುಖಂಡರಾದ ಸೂರ್ಯಪಾಪಣ್ಣ, ಭದ್ರವಾಡಿ, ಚಂದ್ರಶೇಖರ್, ಬಸವರಾಜ ಕರ್ಕಿಹಳ್ಳಿ, ಶಿವಶಂಕರ್, ಕಾಸಟ್ಟಿ ಉಮಾಪತಿ, ಸಾಲಿ ಸಿದ್ದಯ್ಯಸ್ವಾಮಿ, ಭೋಜಪ್ಪ, ಶಂಕರ ಮೇಟಿ, ಭಾರತಿ ಪಾಟೀಲ್, ಮಧುಸೂದನ, ಚಂದ್ರು, ಹೊನ್ನೂರಪ್ಪ, ಜೋಗಿ ಹನುಮಂತಪ್ಪ ಸೇರಿದಂತೆ ಹೊಸಪೇಟೆ, ಎಚ್.ಬಿ.ಹಳ್ಳಿ, ಕೂಡ್ಲಿಗಿ, ಹಡಗಲಿಯ ಕಾರ್ಯಕರ್ತರು ಪಾಲ್ಗೊಂಡಿದ್ದರು.

# ಜನರಿಗಾಗಿ ಬದುಕಿದರು ಅಂಬೇಡ್ಕರ್

### ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿಕೆ। ಸಂವಿಧಾನ ಜಾಗೃತಿ ಜಾಥ



**■ ಹಂಪಿ ಟೈಮ್ಸ್ ಕೂಡ್ಲಿಗಿ**
ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ 75 ವರ್ಷವಾದರೂ ಗಟ್ಟಿಯಾಗಿ ನಿಲ್ಲಲು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಈ ದೇಶಕ್ಕೆ ಕೊಟ್ಟ ಬೃಹತ್ ಲಿಖಿತ ಸಂವಿಧಾನವೇ ಕಾರಣವಾಗಿದೆ ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ತಿಳಿಸಿದರು.

ತಾಲೂಕಿನ ಗುಡೇಕೋಟೆ ಗ್ರಾಮದಲ್ಲಿ ಸೋಮವಾರ ಸಂವಿಧಾನ ಜಾಗೃತಿ ಜಾಥವನ್ನು ಗುಡೇಕೋಟೆ ಗ್ರಾಮಕ್ಕೆ ಬರಮಾಡಿಕೊಂಡು ಮಾತನಾಡಿದರು. ಮೂಲಭೂತ ಹಕ್ಕುಗಳು ಭಾರತ ಸಂವಿಧಾನದ ಆತ್ಮ. ಅಂಬೇಡ್ಕರ್ ತಮ್ಮ ಜೀವನದ ಉದ್ದಗಲಕ್ಕೂ ಸ್ವಾರ್ಥಕ್ಕಾಗಿ ಬದುಕದೆ ಜನರ ಬದುಕಿಗಾಗಿ, ಮೂಲಭೂತ ಹಕ್ಕು ಮತ್ತು ಕರ್ತವ್ಯಗಳಿಗಾಗಿ ಹೋರಾಟ ಮಾಡಿದವರು ಎಂದರು.

ಸಮಾಜ ಕಲ್ಯಾಣ ಇಲಾಖೆಯಿಂದ ಸಂವಿಧಾನ ಜಾಗೃತಿ ಜಾಥಾ ಅಭಿಯಾನವನ್ನು ತಾಲೂಕಿನ ಪ್ರತಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಹಮ್ಮಿಕೊಳ್ಳಲಾಗುತ್ತಿದ್ದು, ಸಮಾಜದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಮನಸುಗಳು ಇದರ >>3

# ಕುಸ್ತಿ ಅಖಾಡ ಸಿದ್ಧತೆ



**■ ಹಂಪಿ ಟೈಮ್ಸ್ ಹೊಸಪೇಟೆ**
ಹಂಪಿ ಉತ್ಸವದ ಅಂಗವಾಗಿ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವ ಪ್ರಭು ಬಿ.ಅವರು ಜನವರಿ 29ರಂದು ಹಂಪಿಗೆ ತೆರಳಿ ವಿವಿಧ ವೇದಿಕೆಗಳ ತಯಾರಿ ಕುರಿತು ಪರಿಶೀಲನೆ ನಡೆಸಿದರು. ಬಳಿಕ ಹೊಸ ಮಲ್ಲಪ್ಪನ ಗುಡಿ ಶ್ರೀ ವಿದ್ಯಾರಣ್ಯ ಶಾಲೆಯ ಆವರಣದಲ್ಲಿ ತಯಾರಾಗುತ್ತಿರುವ ಕುಸ್ತಿ ಅಖಾಡವನ್ನು ಸಹ ಪರಿಶೀಲಿಸಿದರು.ಈ ವೇಳೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.






# ಚಿತ್ರಕಲೆ ಶಿಬಿರಕ್ಕೆ ಡಿಸಿ, ಸಿಇಓ ಚಾಲನೆ



**■ ಹಂಪಿ ಟೈಮ್ಸ್ ಹೊಸಪೇಟೆ**
ಹಂಪಿ ಉತ್ಸವ ಪ್ರಯುಕ್ತಜನವರಿ 29ರಂದು ಹಂಪಿಯಲ್ಲಿ ಹಮ್ಮಿಕೊಳ್ಳಲಾದ ಚಿತ್ರಕಲೆ ಶಿಬಿರಕ್ಕೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸದಾಶಿವ ಪ್ರಭು ಬಿ.ಅವರು ಚಿತ್ರ ಬಿಡಿಸುವುದರ ಮೂಲಕ ಚಾಲನೆ ನೀಡಿದರು.

ನಾಲ್ಕು ದಿನಗಳ ಕಾಲ ನಡೆಯಲಿರುವ ಈ ಚಿತ್ರಕಲೆ ಶಿಬಿರದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಬಂದಿರುವ 15 ಜನ ಚಿತ್ರ ಬರಹಗಾರರು ಹಂಪಿ ವಾಸ್ತುಶಿಲ್ಪ ಕುರಿತು ಚಿತ್ರಗಳನ್ನುಬಿಡಿಸುವರು. ಈ ಎಲ್ಲಾ ಚಿತ್ರಗಳನ್ನುಫೆಬ್ರವರಿ 2ರಿಂದ 4ರ ವರೆಗೆ ಜರುಗುವ ಹಂಪಿ ಉತ್ಸವದ ವಸ್ತು ಪ್ರದರ್ಶನ ಮಳಿಗೆಯಲ್ಲಿ ಪ್ರದರ್ಶನಕ್ಕೆ ಇಡಲಾಗುವುದು. ಈ ಸಂದರ್ಭದಲ್ಲಿ ಹಂಪಿ ಉತ್ಸವದ ಗ್ರಾಮೀಣ ಕ್ರೀಡೆ, ಶಿಲ್ಪಕಲೆ ಮತ್ತು ಚಿತ್ರಕಲೆ ನೋಡಲ್ ಅಧಿಕಾರಿಗಳಾದ ಹೊಸಪೇಟೆ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಎಂ.ಉಮೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ದಲಿಂಗೇಶ ರಂಗಣ್ಣನವರ ಸೇರಿದಂತೆವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಚಿತ್ರ ಬರಹಗಾರರು ಉಪಸ್ಥಿತರಿದ್ದರು.







## ವಚನ ಅರಿವು

### ಗದಕತನ ಬೇಡ

**ಮಡಕೆಗೆ ಮುಸುಕು, ತಮಗೆ ಗುಹ್ಯಕ್ಕೆ ದಶಾವಸ್ಥೆ.**
**ಬಾಹ್ಯದಲ್ಲಿ ಶೀಲ, ಅಂತರ್ಯಾಮಿಯಲ್ಲಿ ದುಶ್ಶೀಲ.**
**ಹೊರಗೆ ವ್ರತ, ಒಳಗೆ ಗದಕ.**
**ಮಾಡಿಕೊಂಡ ವಿಧಿಯನೀಸುವುದಕ್ಕೆ**
**ವಾದ್ಯದ ಒತ್ತೆಯ ಹಿಡಿದ ದಾಸಿಯಂತೆ, ಇನ್ನಾರಿಗೆ ಹೇಳುವೆ?**
**ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆ ನೀನೆ ಬಲ್ಲೆ.**
**– ಶಿವಲೆಂಕ ಮಂಚಣ್ಣ**

ಗಡಿಗೆಗೆ ಬಟ್ಟೆಯ ಮುಸುಕು ಹಾಕಿ ಮುಚ್ಚಿಟ್ಟಂತೆ, ನಾವು ಗೂಢವಾಗಿ, ಗುಪ್ತವಾಗಿ ವಿವಿಧ ರೀತಿಯ ಕೆಟ್ಟ ಕೆಲಸಗಳನ್ನು ಯಾರಿಗೂ ತಿಳಿಯದಂತೆ ಮಾಡುತ್ತೇವೆ. ಹೊರ ನೋಟಕ್ಕೆ ಬಹಳ ಒಳ್ಳೆಯವರಂತೆ ನಟಿಸುವುದು, ಶೀಲವಂತರಂತೆ ವರ್ತಿಸುವುದು ಮಾಡುತ್ತೇವೆ. ಆದರೆ ಮನಸ್ಸಿನ ಒಳಗೆ ಕೆಟ್ಟದ್ದನ್ನು ತುಂಬಿಕೊಂಡು, ಕೆಟ್ಟ ಕೆಲಸಗಳನ್ನು ಮಾಡುವುದು ಮನುಷ್ಯನ ಸ್ವಭಾವವಾಗಿದೆ. ಬೇರೆಯವರ ಕಣ್ಣಿಗೆ ಒಳ್ಳೆಯ ವ್ರತನಿಷ್ಠರಂತೆ, ಪ್ರಾಮಾಣಿಕರಂತೆ ಕಾಣಿಸಿಕೊಳ್ಳುವುದು, ಒಳಗೊಳಗೆ ಮೋಸ, ವಂಚನೆ, ದ್ರೋಹ, ಅನೈತಿಕ ಕೆಲಸಗಳಲ್ಲಿ ತೊಡಗುವವರನ್ನು ಕುರಿತು ತಾವು ಮಾಡಿದ ಪಾಪದ ಕೆಲಸಕ್ಕೆ ತಾವೇ ಅನುಭವಿಸಲೇಬೇಕಾಗುತ್ತದೆ. ದಾಸಿಯ ನೋವಿನಂತೆ ನೀನು ನೋವು ಅನುಭವಿಸಬೇಕಾಗುತ್ತದೆ ಎನ್ನುತ್ತದೆ ಮಂಚಣ್ಣನ ಈ ವಚನ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಅಧ್ಯಕ್ಷರಾಗಿ ಸುರೇಶ್ ಯಳಕಪ್ಪನವರ್ ಆಯ್ಕೆ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಕರ್ನಾಟಕ ಪತ್ರಕರ್ತರ ಸಂಘದ ನೂತನ ಅಧ್ಯಕ್ಷರಾಗಿ ಸುರೇಶ್ ಯಳಕಪ್ಪನವರ್ ಆಯ್ಕೆಯಾಗಿದ್ದಾರೆ.



ಪಟ್ಟಣದಲ್ಲಿನ ಸಂಘದ ಕಛೇರಿಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಬಿ.ಹೆಚ್.ಎಸ್, ರಾಜು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಂಘದ ತಾಲೂಕು ಪದಾಧಿಕಾರಿಗಳನ್ನು ಇತ್ತೀಚೆಗೆ ಆಯ್ಕೆ ಮಾಡಲಾಯಿತು.
ಸುರೇಶ ಯಳಕಪ್ಪನವರ್ (ಅಧ್ಯಕ್ಷರು), ದತ್ತಾತ್ರೇಯ ಮಾಲವಿ, (ಉಪಾಧ್ಯಕ್ಷರು), ಉಮೇಶ ನೆಲ್ಕುದ್ರಿ (ಖಜಾಂಚಿ), ಯು.ಎಂ.ಶಿವಶಂಕರಸ್ವಾಮಿ (ಪ್ರಧಾನಕಾರ್ಯದರ್ಶಿ), ಪಿ.ಫಕ್ರುದ್ದೀನ್ (ಸಹ ಕಾರ್ಯದರ್ಶಿ), ಹೆಚ್.ಚಂದ್ರಶೇಖರ್, ಪೂಜಾರ್ ಸಿದ್ದಪ್ಪ, ಕೆ.ಎಸ್.ಲಕ್ಷ್ಮಣ, ಬಿ.ಸಿದ್ದಪ್ಪ (ಸದಸ್ಯರು), ಕೆ.ಪಿ.ಮಠದ, ಹೆಚ್.ಎಂ.ನಾಗರಾಜ (ಗೌರವ ಸಲಹೆಗಾರರು), ಕೊಟ್ರೇಶ ಶೆಟ್ಟರ್, ಎಸ್.ಲಿಂಗನಗೌಡ್ರು (ಕಾನೂನು ಸಲಹೆಗಾರರು) ಆಯ್ಕೆಯಾಗಿದ್ದಾರೆ.
ಪತ್ರಕರ್ತರಿಗೆ ಸರಕಾರದಿಂದ ಒದಗಬೇಕಿರುವ ನ್ಯಾಯಯುತ ಸೌಲಭ್ಯಗಳನ್ನು ಒದಗಿಸುವಲ್ಲಿ ಹೋರಾಟ ರೂಪಿಸಲಾಗುವುದು. ಸಂಘದಿಂದ ಶೀಘ್ರದಲ್ಲೆ ಸಮಾಜ ಮುಖಿ ಚಟುವಟಿಕೆಗಳ ಮೂಲಕ ಮಾದರಿ ಸಂಘವನ್ನಾಗಿ ನಿರ್ವಹಿಸಲಾಗುವುದು ಎಂದು ನೂತನ ಅಧ್ಯಕ್ಷ ಸುರೇಶ್ ಯಳಕಪ್ಪನವರ್ ಅವರು ಹಂಪಿ ಟೈಮ್ಸ್‌ಗೆ ತಿಳಿಸಿದ್ದಾರೆ.

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

# ಅಂತರಾಷ್ಟ್ರೀಯ ಕುಸ್ತಿಪಟು ಅರ್ಜುನ್ ಹಲಕುರ್ಕಿ

ಬಾಗಲಕೋಟೆ ಜಿಲ್ಲೆ ಕ್ರೀಡಾ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡಿದ್ದು,ತನ್ನ ಮಡಿಲಲ್ಲಿ ಸಾಕಷ್ಟು ಕ್ರೀಡಾಪಟುಗಳನ್ನು ಬೆಳೆಸಿ ನಾಡಿಗೆ ನೀಡಿದ ಕೀರ್ತಿ ತನ್ನಲ್ಲಿ ಉಳಿಸಿಕೊಂಡಿದೆ. ಬೇವಿನಮಟ್ಟಿ ಇಂದು ಇಡೀ ರಾಷ್ಟ್ರವೇ ನೋಡುವ ಕೀರ್ತಿವಂತ ಕ್ರೀಡಾಪಟುವನ್ನು ನೀಡಿದೆ.

ಗಾರೆ ಕೆಲಸಗಾರ ದುರ್ಗಪ್ಪ ತನ್ನ ಬಾಲ್ಯದಲ್ಲಿ ತನ್ನ ಒಡಹುಟ್ಟಿದ ತಮ್ಮನೊಂದಿಗೆ ಕುಸ್ತಿ ನೆಡೆಯುವ ಸ್ಥಳಕ್ಕೆ ತನ್ನ ಮಗನಾದ ಅರ್ಜುನನನ್ನು ಕರೆದುಕೊಂಡು ಹೋಗುತ್ತಿದ್ದರು,ಅದರಿಂದ ಪ್ರೇರಣೆಗೊಂಡು ಬಯಲು ಕುಸ್ತಿಗಳಲ್ಲಿಗಳಿಸಿದ ಹಣದಲ್ಲಿ ಮಿಠಾಯಿ ತಿಂದು ಸಂತೋಷ ಪಡುತ್ತಿದ್ದ ಮುಂದಿನ ದಿನಗಳು ಆತನಿಗೆ ತಾನೋರ್ವ ರಾಷ್ಟ್ರ ಮೆಚ್ಚುವ ಅಂತರಾಷ್ಟ್ರೀಯ ಕುಸ್ತಿಪಟು ಆಗುತ್ತೇನೆಂದು ಅನಿಸಿರಲಿಲ್ಲ.

2010 ತನ್ನ ಕುಸ್ತಿ ಜೀವನದಲ್ಲಿ ಬರ ಸಿಡಿಲು ಬಡಿದ ದಿನ ಆ ವರ್ಷ ನನ್ನ ತಂದೆಯವರ ದೈವಾಧೀನರಾಗುತ್ತಾರೆ ನನ್ನ ಹಿರಿಯ ಅಣ್ಣ ಅಂಗವಿಕಲ ಅವನಿಂದ ಕೆಲಸ ಮಾಡಿ ನನ್ನ ತಾಯಿ ತಮ್ಮನನ್ನು ಸಾಕಲು ಸಾಧ್ಯವಾಗುವುದಿಲ್ಲ.ತಮ್ಮ ಗಾರೆ ಕೆಲಸ ಮಾಡಿ ಜೀವನ ನಿರ್ವಹಿಸಲು ಸಹಕಾರ ನೀಡುತ್ತಿದ್ದ ಇದನ್ನು ಕಣ್ಣಾರೆ ನೋಡಿದ ನಾನು ಈ ಕುಸ್ತಿಯನ್ನು ಬಿಟ್ಟು ಅವರಿಗೆ ಸಹಕಾರಿಯಾಗಿ ನಿಲ್ಲಬೇಕೆಂಬ ಕಾರಣದಿಂದ ಕುಸ್ತಿಯಿಂದ ದೂರ ಉಳಿಯಲು ತೀರ್ಮಾನಿಸಿದ್ದೆ,ಆದರೆ ಮನಸ್ಸಿನ ಮೂಲೆಯಲ್ಲಿ ತನ್ನ ತಂದೆಯ ಆಸೆಯನ್ನು ಈಡೇರಿಸಲು ಸಾಧ್ಯವಾಗಲಿಲ್ಲವಲ್ಲ ಎಂಬ ಕೊರಗು ಕಾಡತೊಡಗಿತು ಈ ಚಡಪಡಿಕೆಯನ್ನು ಗಮನಿಸಿದ ನನ್ನ ಕುಟುಂಬ ಸಹಕರಿಸಲು ಮುಂದಾದಾಗ ಇಡೀ ಬೇವಿನಮಟ್ಟಿಯ ಜನ ನನ್ನ ಬೆನ್ನಿಗೆ ನಿಲ್ಲುತ್ತಾರೆ ಅವರು ಅಂದು ತಮ್ಮಿಂದಾದ ಸಹಕಾರ ಮಾಡಿದರ ಪರಿಣಾಮ ನಾನಿಂದು ಅಂತರಾಷ್ಟ್ರೀಯ ಪದಕ ಗಳಿಸಲು ನೆರವಾಯಿತು ಎಂದು ಕಣ್ಣಂಚಲ್ಲಿ ನೀರು ತುಂಬಿಕೊಳ್ಳುತ್ತಾರೆ ಅರ್ಜುನ್.

ತಮ್ಮ ಬಾಲ್ಯ ಶಿಕ್ಷಣವನ್ನು ಬೇವಿನಮಟ್ಟಿ ಸರ್ಕಾರಿ ಶಾಲೆ (1–5),6–7 ನವನಗರ, ಬಾಗಲಕೋಟೆ 08–10ನೇ ತರಗತಿವರೆಗೆ ದಾವಣಗೆರೆ ಸರ್ಕಾರಿ ಶಾಲೆಯಲ್ಲಿ ಪೂರೈಸಿರುತ್ತಾರೆ.

ಹಬ್ಬ ಹರಿದಿನಗಳಲ್ಲಿ ಮಟ್ಟಿ ಕುಸ್ತಿಯಲ್ಲಿ ಆಡಿದ ನನಗೆ ಅಷ್ಟಾಗಿ ಮ್ಯಾಟ್ ಕುಸ್ತಿಯ ಬಗ್ಗೆ ಅರಿವಿರಲಿಲ್ಲ

ಬಾಗಲಕೋಟೆ ಕುಸ್ತಿ ಹಾಸ್ಟೆಲ್ ಗೆ ಸೇರಿದಾಗ ರಾಜುಪಾಳಕ್ಕೆ (ಆಲಗೂರು,ಜಮಖಂಡಿ)ರವರು ತರಬೇತುದರಾಗಿ ಕೆಲವೊಂದು ಮೂಲಭೂತ ಕುಸ್ತಿ ಕೌಶಲ್ಯಗಳನ್ನು ಕಲಿಸಿಕೊಟ್ಟಿದ್ದರು.

ಆದರೆ ಪಾಯಿಂಟ್ ಕುಸ್ತಿಯ ಬಗ್ಗೆ ಅಷ್ಟೊಂದು ನನಗೆ ಅರಿವಿರಲಿಲ್ಲ ಮುಂದೆ ಹಳಿಯಾಳ,ಮುಧೋಳ ಮುಂತಾದವು ಕಡೆಯಲ್ಲಿ ನಡೆಯುತ್ತಿದ್ದ ಪಾಯಿಂಟ್ ಕುಸ್ತಿ ನೋಡಿ ಹಾಗೂ ಮಣ್ಣು ಕುಸ್ತಿಯಲ್ಲಿ ಕೇವಲ ಹೆಸರು,ಹಣ ಗಳಿಸಬಹುದು ಆದರೆ ಪಾಯಿಂಟ್ ಕುಸ್ತಿಯನ್ನು ಮಾಡಿ ಪ್ರಶಸ್ತಿ ಪತ್ರಗಳನ್ನು ಗಳಿಸಿದರೆ ಹಣ,ಹೆಸರಿನೊಂದಿಗೆ ಮುಂದೆ ಸರ್ಕಾರಿ ಕೆಲಸ ಗಿಟ್ಟಿಸಿ ಕೊಳ್ಳಬಹುದು ಎಂಬ ಹಿರಿಯರ ಕಿವಿ ಮಾತಿನಿಂದ ಪ್ರೇರೇಪಿತಗೊಂಡು ಆಡಲಾರಂಭಿಸಿದೆ.

ದಾವಣಗೆರೆ ಕುಸ್ತಿ ಹಾಸ್ಟೆಲ್ನಲ್ಲಿದ್ದ ಕರ್ನಾಟಕ ಪೊಲೀಸ್ ಕುಸ್ತಿ ತಂಡದ ಹಿರಿಯ ಕುಸ್ತಿಪಟುಗಳಾದ ಲೋಕೇಶ್,ಹನುಮಂತ ಚನ್ನಾಳ, ಶ್ರೀಶೈಲ,ಮಲ್ಲಪ್ಪ ಪಾಟೀಲ ಮುಂತಾದ ದೊಡ್ಡ ತೂಕದ ವಿಭಾಗದ ಪೈಲ್ವಾನರನ್ನು ಕಂಡು ಅವರಂತೆ ನಾನಾಗಬೇಕೆಂದು ಆಸೆ ಪಡುತ್ತಿದ್ದೆ. ಅವರು ಕೂಡ ನನಗೆ ಸಾಕಷ್ಟು ಸಹಕಾರವನ್ನು ನೀಡಿದ್ದಾರೆ ಹಾಗೆಯೇ ತಮ್ಮಂತೆ ಕುಸ್ತಿ ಮಾಡುವುದಲ್ಲದೆ ನೌಕರಿಯನ್ನು ಪಡೆಯಬೇಕೆಂದೇಳಿ ಪ್ರೇರೇಪಿಸುತ್ತಿದ್ದರು.

ನಾನು ದಾವಣಗೆರೆ ಕುಸ್ತಿ ಕ್ರೀಡಾ ನಿಲಯಕ್ಕೆ ಸೇರಿದಾಗ ಅಲ್ಲಿನ ತರಬೇತುದಾರರಾದ ಶಿವಾನಂದ್ ಸರ್ ರವರು ಹಾಕಿಕೊಟ್ಟ ದಾರಿಯಲ್ಲಿ ಸಾಗಿದೆ ಅವರು ಹೇಳಿಕೊಟ್ಟಂತಹ ಕೌಶಲ್ಯಗಳು,ಮಾರ್ಗಗಳು ನನ್ನ ಕ್ರೀಡಾ ಸಾಧನೆಯಲ್ಲಿ ಸಾಕಷ್ಟು ನೆರವಾಗಿದೆ ಅವರ ಋಣ ನನ್ನ ಮೇಲಿದೆ ಎಂದು ತಮ್ಮ ಗುರುವಿನ ಬಗ್ಗೆ ಹೆಮ್ಮೆಯಿಂದ ನುಡಿಯುತ್ತಾರೆ ಅರ್ಜುನ.

2018 ರಲ್ಲಿ ಹವಾಲ್ದಾರನಾಗಿ ಸೇನೆಯಲ್ಲಿ ಕೆಲಸವನ್ನ ಗಿಟ್ಟಿಸಿಕೊಂಡ ಅರ್ಜುನನಿಗೆ ಕೃಷ್ಣನಾಗಿದ್ದು ನಾಡಿನ ಹೆಸರಾಂತ ಕುಸ್ತಿಪಟು ಮತ್ತು ತರಬೇತುದಾರರಾದ ಏಷ್ಯನ್ ಮೇಡಲಿಸ್ಟ್ ವಿನಾಯಕ್ ದಳವಿಯವರು.

ಸರ್ವಿಸಸ್ ನಲ್ಲಿ ತರಬೇತಿ ಪಡೆಯುವಾಗ ನಮ್ಮವರೇ ಆದ ರಫಿಕ್ ಹೂಳಿ ಅವರು ಕೂಡ ಪ್ರೇರೇಪಿಸುವುದಲ್ಲದೆ ಈಗಲೂ ಕೂಡ ನೆರವನ್ನು ನೀಡುತ್ತಿದ್ದಾರೆ.

ಸಹಕಾರ ನೀಡಿದ,ಇಂದಿಗೂ ಸಹಕಾರ ನೀಡುತ್ತಿರುವವರೆಲ್ಲರಿಗೂ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ ಅರ್ಜುನ್.




ಕ್ರೀಡಾ ಸಾಧನೆಗಳನ್ನು ನೋಡುವುದಾದರೆ ಅಂತರಾಷ್ಟ್ರೀಯ ಮಟ್ಟದಲ್ಲಿ 2016 ಫಿಲಿಪೈನ್ಸ್ ನಲ್ಲಿ ನಡೆದ ಜೂನಿಯರ್ ಏಷ್ಯನ್ ಕುಸ್ತಿ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸುವಿಕೆ,2017 ಟರ್ಕಿಯಲ್ಲಿ ನಡೆದ ವರ್ಲ್ಡ್ ಸ್ಕೂಲ್ ಗೇಮ್ಸ್ ನಲ್ಲಿ ಬೆಳ್ಳಿಯ ಪದಕ,2016 ಫ್ರಾನ್ಸ್ ನಲ್ಲಿ ನಡೆದ ಜೂನಿಯರ್ ವರ್ಲ್ಡ್ ರೆಸ್ಲಿಂಗ್ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸುವಿಕೆ, 2017 ಪಿನ್ಲ್ಯಾಂಡ್ ನಲ್ಲಿ ನಡೆದ ಜೂನಿಯರ್ ವರ್ಲ್ಡ್ ರೆಸ್ಲಿಂಗ್ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸುವಿಕೆ,2020 ಏಷಿಯನ್ ಚಾಂಪಿಯನ್ಶಿಪ್ ನಲ್ಲಿ (ದೆಹಲಿ) ಕಂಚಿನ ಪದಕ, 2022 ರಲ್ಲಿ ಮಂಗೋಲಿಯಾದಲ್ಲಿ ನಡೆದ ಕುಸ್ತಿ ಸ್ಪರ್ಧೆಯಲ್ಲಿ ಕಂಚಿನ ಪದಕ.

ವರ್ಲ್ಡ್ ಟ್ರಯಲ್ಸ್ ನಲ್ಲಿ ಆಯ್ಕೆಗೊಂಡು 2022 ರ ವರ್ಲ್ಡ್ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸುವಿಕೆ ಮತ್ತು 2021 ರಲ್ಲಿ ವರ್ಲ್ಡ್ ರ್ಯಾಂಕಿಂಗ್ ಸೀರೀಸ್ ಇಟಲಿಯಲ್ಲಿ ಕಂಚಿನ ಪದಕ ಮತ್ತು



**ಡಾ.ಸುಧಾಕರ ಜಿ.ಲಕ್ಕವಳ್ಳಿ**
**ಕ್ರೀಡಾ ಲೇಖಕರು, 8747969381**

2020 ಸೀನಿಯರ್ ಏಷ್ಯನ್ ಚಾಂಪಿಯನ್ಶಿಪ್ ನಲ್ಲಿ ಕಂಚಿನ ಪದಕ ಪಡೆದಿರುತ್ತಾರೆ.

ಇದಲ್ಲದೆ ದೇಶದ ಹಲವಡೆ ನಡೆದ ರಾಷ್ಟ್ರೀಯ ಕುಸ್ತಿ ಪಂದ್ಯಗಳು, ಸರ್ವಿಸಸ್ ಪಂದ್ಯಗಳಲ್ಲಿ ಭಾಗವಹಿಸಿ ಪದಕಗಳನ್ನು ಗಳಿಸಿರುತ್ತಾರೆ.

ಇವರ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿನ ಸಾಧನೆಯನ್ನು ಪರಿಗಣಿಸಿದ ಕರ್ನಾಟಕ ಸರ್ಕಾರ 2018–ಕರ್ನಾಟಕದ ಅತ್ಯುತ್ತಮ ಕುಸ್ತಿಪಟು ಮತ್ತು ಏಕಲವ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಭಾರತೀಯ ಶೈಲಿ ಕುಸ್ತಿಯಲ್ಲಿ (ಜಮಖಂಡಿ)ನಡೆದ ಕುಸ್ತಿ ಸ್ಪರ್ಧೆಯಲ್ಲಿ'ಬಾಲ ಕೇಸರಿ' ಎಂಬ ಟೈಟಲ್ನೊಂದಿಗೆ ಬೆಳ್ಳಿ ಗದೆ ಪಡೆದಿರುತ್ತಾರೆ.

ವಿಶೇಷವಾಗಿ ಕ್ರೀಡಾ ತರಬೇತಿಯ ಬಗ್ಗೆ ಚರ್ಚಿಸಿದಾಗ ನಾನು ಸೇವೆಗೆ ಸೇರಿದ ನಂತರ ವೈಜ್ಞಾನಿಕ ತರಬೇತಿಯನ್ನು ಪಡೆದೆ,ಇಲ್ಲಿ ನಮ್ಮೊಂದಿಗೆ ಹಲವಾರು ಜನ ವಿದೇಶಿ,ಸ್ವದೇಶಿ ಕೋಚ್ಗಳು ಇರುತ್ತಾರೆ.

ಒಬ್ಬೊಬ್ಬರು ಒಂದೊಂದು ವಿಷಯದಲ್ಲಿ ಪರಿಣಿತರಾಗಿದ್ದು ಕರಾರುವಕ್ಕಾದ ತರಬೇತಿ ನೀಡುವುದರೊಂದಿಗೆ ನಾವು ಮಾಡುವ ತಪ್ಪುಗಳನ್ನು ಬೇಗ ತಿದ್ದುತ್ತಾರೆ ಹಾಗೂ ನಮ್ಮೊಂದಿಗೆ ಒಲಂಪಿಕ್ ಗೆ ಆಯ್ಕೆಗೊಂಡಿರುವಂತಹ ಹಾಗೂ ಪದಕ ವಿಜೇತ ಕುಸ್ತಿಪಟುಗಳಿದ್ದು ಅವರುಗಳು ಸಹ ನಮ್ಮನ್ನು ಹುರಿದುಂಬಿಸಿ ಕೌಶಲ್ಯಗಳನ್ನು ತಿದ್ದುತ್ತಾರೆ ಹಾಗೂ ಸಪೋರ್ಟ್ ನೀಡುತ್ತಾರೆ.

ಯಾವುದೇ ಕ್ರೀಡೆಯ ಕ್ರೀಡಾಪಟುಗಳಾಗಲಿ ಶಿಸ್ತು ಬಹಳ ಮುಖ್ಯ,ಕಠಿಣ ತರಬೇತಿ ಹಾಗೂ ಹಿರಿಯ ಕುಸ್ತಿಪಟುಗಳು, ತರಬೇತುದಾರರು ನೀಡುವ ಸಲಹೆಗಳನ್ನು ಸ್ವೀಕಾರ ಮಾಡುವ ಗುಣ ಮತ್ತು ಸರಿಯಾದ ಆಹಾರ ಕ್ರಮ,ವಿಶ್ರಾಂತಿ,ಸಮತೋಲಿತ ಆಹಾರ ಬಹಳ ಮುಖ್ಯ ದೈಹಿಕ ಸದೃಢತೆಯೊಂದಿಗೆ ಮಾನಸಿಕ ದೃಢತೆಯು ಬಹಳ ಮುಖ್ಯ ಆ ನಿಟ್ಟಿನಲ್ಲಿ ಯೋಗ,ಧ್ಯಾನವನ್ನು ಅಳವಡಿಸಿಕೊಳ್ಳಬೇಕು.

ಕುಸ್ತಿಪಟುಗಳು ಸಮಯವನ್ನು ಸರಿಯಾಗಿ ಸದುಪಯೋಗ ಮಾಡಿಕೊಳ್ಳಿ ಮೊಬೈಲ್ನೊಂದಿಗೆ ಕಾಲಹರಣ ಮಾಡುವ ಬದಲು ಕುಸ್ತಿಗೆ ಸಂಬಂಧಿಸಿದ ಕೌಶಲ್ಯಗಳು,ತರಬೇತಿಗಳು ಮ್ಯಾಚ್ಗಳನ್ನು ನೋಡಿ ಸಮಯದ ಸದುಪಯೋಗದೊಂದಿಗೆ ಮೊಬೈಲ್ನ ಉಪಯೋಗ ಪಡೆದುಕೊಳ್ಳಿ ಎಂದು ಹೇಳುತ್ತಾರೆ ಅರ್ಜುನ್.

ಭಾರತೀಯ ಕುಸ್ತಿ ತರಬೇತಿಗೆ ಹೋಲಿಸಿದರೆ ವಿದೇಶಿ ತರಬೇತಿಯು ಸ್ವಲ್ಪ ವಿಶಿಷ್ಟವಾಗಿದ್ದು ವೈಜ್ಞಾನಿಕತೆ ಹೆಚ್ಚಾಗಿರುತ್ತದೆ ಒಬ್ಬ ಆಟಗಾರನ ತಪ್ಪುಗಳನ್ನು ಬಹುಬೇಗನೆ ಕಂಡುಕೊಂಡು ಅದಕ್ಕೆ ಬೇಕಾದ ತರಬೇತಿಯನ್ನು ನೀಡುವುದರೊಂದಿಗೆ ಹೆಚ್ಚು ಹೆಚ್ಚು ಸಂಶೋಧನೆಗಳನ್ನು ಕೈಗೊಳ್ಳುತ್ತಾರೆ ಎಂದು ಹೇಳುತ್ತಾರೆ ಕುಸ್ತಿಪಟು ಅರ್ಜುನ್.

ತಮ್ಮ ದಿನನಿತ್ಯದ ಆಹಾರ ಕ್ರಮಗಳನ್ನು ಹಂಚಿಕೊಂಡ

ಅವರು ತಮ್ಮ ಆಹಾರದಲ್ಲಿ ತರಕಾರಿ,ಹಣ್ಣುಗಳು,ಪ್ರೋಟೀನ್ ಶೇಕ್, ಮೊಟ್ಟೆ, ಮೊಳಕೆ ಕಟ್ಟಿದ ಕಾಳು ಎಳನೀರು, ಒಂದಿಷ್ಟು ಮಾಂಸಹಾರಗಳು,ಬಾದಾಮಿ ಮೊದಲಾದವುಗಳನ್ನು ದಿನನಿತ್ಯ ಬಳಸುತ್ತೇನೆ 55 ರಿಂದ 60 ಕೆಜಿ ವಿಭಾಗದಲ್ಲಿ ಗ್ರಿಕೋ ರೋಮನ್ ಶೈಲಿಯಲ್ಲಿ ಭಾಗವಹಿಸುವ ನಾನು ತೂಕವನ್ನು ನಿರ್ವಹಿಸುವ ಸಲುವಾಗಿ ಕಟ್ಟುನಿಟ್ಟಿನ ಆಹಾರ ಕ್ರಮವನ್ನು ಅನುಸರಿಸುತ್ತೇನೆ.ತಿನ್ನುವ ಆಸೆ ಹೆಚ್ಚಾದಾಗ ತಿನ್ನುತ್ತೇನೆ ಆದರೆ ಕರಗಿಸುವ ಹೊಣೆಯು ನನ್ನದೇ ಎಂದು ನಗುತ್ತಾರೆ.

ನಾನು ದಾವಣಗೆರೆ ಹಾಸ್ಟೆಲ್ ನಲ್ಲಿ ಇದ್ದಾಗ ಡ್ರೈ ಫ್ರೂಟ್ಸ್ ಗಳನ್ನು ತಿನ್ನಲು ನನ್ನ ಬಳಿ ಹಣ ವಿರುತ್ತಿರಲಿಲ್ಲ ,ಆಗ ಪರುಶುರಾಮ ನನ್ನ ರೂಮ್ ಮೇಟ್ ಅವರ ತಂದೆ ತಂದೆ ಅವನಿಗೆ ತಂದುಕೊಡುತ್ತಿದ್ದ ಬದಾಮು ಮತ್ತು ಫ್ರೂಟ್ಸ್ ಗಳನ್ನು ನನಗೂ ಕೊಡುತ್ತಿದ್ದ ಎಂದು ತನ್ನ ಸ್ನೇಹಿತನನ್ನು ನೆನೆಸಿಕೊಳ್ಳುತ್ತಾರೆ.ತರಬೇತಿಗೆ ತಕ್ಕ ಪೋಷಕಾಂಶವನ್ನು ಸರಿದೂಗಿಸಿಕೊಳ್ಳಲು ಹಾಸ್ಟೆಲ್ ನಲ್ಲಿ ದೊರೆಯುತ್ತಿದ್ದ ಹಾಲು,ಮೊಳಕೆ ಕಟ್ಟಿದ ಕಾಳುಗಳು ಮತ್ತು ಚಪಾತಿ ಹೆಚ್ಚು ಸೇವಿಸುತ್ತಿದ್ದೇನೆ ಹೇಳುತ್ತಾರೆ.

ಅಂದಿನ ದಿನಗಳಲ್ಲಿ ಬಯಲು ಕುಸ್ತಿಗಳನ್ನು ಆಡಿ ಗಳಿಸುತ್ತಿದ್ದ ಅಲ್ಪಸ್ವಲ್ಪ ಹಣವನ್ನು ಒಟ್ಟುಗೂಡಿಸಿ ವಿನಾಕಾರಣ ಹಣವನ್ನು ಪೋಲು ಮಾಡದೆ ಊರಿಗೆ ಹೋದಾಗ ತಾಯಿಯವರಿಗೆ ನೀಡಿ ಬರುತ್ತಿದ್ದೆ ಏನು ಮಾಡುವುದು ಬಡತನ ಸರ್ ಎನ್ನುತ್ತಾರೆ ಅರ್ಜುನ್.

ಸರಿಯಾದ ಸಾಮರ್ಥ್ಯವಿರುವ ವಯಸ್ಸಿನಲ್ಲಿ ಸರ್ಕಾರಿ ಕೆಲಸ ದೊರೆತರೆ ಕ್ರೀಡಾಪಟುಗಳು ಹೆಚ್ಚಿನ ಸಾಮರ್ಥ್ಯವನ್ನು ತೋರಿ ಪದಕಗಳನ್ನು ಗೆಲ್ಲುತ್ತಾರೆ.

ಹೆಚ್ಚು ಹೆಚ್ಚು ಕ್ರೀಡಾ ಹಾಸ್ಟೆಲ್ ಗಳನ್ನು ತೆರೆದು ಉತ್ತಮ ತರಬೇತುದಾರರನ್ನು ನೇಮಿಸುವುದಲ್ಲದೆ ಅವರಿಗೆ ಬೇಕಾಗುವ ಸೌಲಭ್ಯಗಳನ್ನು ಒದಗಿಸಿಕೊಟ್ಟರೆ ನನ್ನಂಥ ಅದೆಷ್ಟೋ ಕ್ರೀಡಾಪಟುಗಳನ್ನು ಹುಟ್ಟು ಹಾಕುತ್ತಾರೆ ಅದರೊಂದಿಗೆ ಕಾಲಕಾಲಕ್ಕೆ ತರಬೇತುದಾರರಿಗೆ ಮೂಲಭೂತ ಸೌಕರ್ಯಗಳನ್ನು ನೀಡುವುದರೊಂದಿಗೆ ಚೈತನ್ಯ ತುಂಬುವ ಕೆಲಸವಾಗಬೇಕು.

ಮುಂದೆ ಒಲಂಪಿಕ್ಸ್ ಪದಕ ಗೆಲ್ಲುವ ಕನಸನ್ನು ನನಸು ಮಾಡುವ ಅವಕಾಶನನ್ನಮುಂದಿದ್ದುಅದಕ್ಕಾಗಿಕಠಿಣಶ್ರಮಪಡುತ್ತಿದ್ದು,ಪದಕವನ್ನು ಗೆದ್ದು ತನ್ನ ತಂದೆ ಹಾಗೂ ಬೇವಿನಮಟ್ಟಿಯ ಕ್ರೀಡಾ ಪ್ರೋತ್ಸಾಹಕರಿಗೆ ಅರ್ಪಿಸಬೇಕು ಆಗ ಮಾತ್ರ ಅವರ ಆತ್ಮಕ್ಕೆ ಶಾಂತಿ ಮತ್ತು ಬೇವಿನಮಟ್ಟಿಯ ಜನರ ಋಣ ತೀರಿಸಿದಂತಾಗುತ್ತದೆ.

ನಾನು ಸಾಧಿಸುವಾಗ ನನ್ನ ಕಣ್ಣ ಮುಂದೆ ನನ್ನ ತಂದೆ ಇಲ್ಲವೆಂಬ ಕೊರಗು ನನ್ನನ್ನು ಬಾವುಕನಾಗಿಸುತ್ತದೆ ಎಂದು ಹೇಳುತ್ತಾರೆ ಅರ್ಜುನ.

ಸ್ನೇಹಜೀವಿಯಾಗಿರುವ ಅರ್ಜುನ್ ರವರಿಗೆ ಭಾರತದ ಹೆಸರಾಂತ ಕ್ರಿಕೆಟರ್ ರೋಹಿತ್ ಶರ್ಮ ಹಾಗೂ ಕರ್ನಾಟಕದ ಚಲನಚಿತ್ರ ನಟ ದುನಿಯಾ ವಿಜಯ್ ಸಾಕಷ್ಟು ಪ್ರೋತ್ಸಾಹವನ್ನು ನೀಡುತ್ತಿರುವುದು ಇವರಲ್ಲಿ ಗೆಲ್ಲುವ ಛಲ ನೂರ್ಮಡಿ ಗೊಂಡಿದೆ.


ಭಾರತದ ಹೆಸರಾಂತ ಕುಸ್ತಿಪಟುಗಳಾದ ಬಜರಂಗ್ ಪೂನಿಯ,ಯೋಗೇಶ್ವರ್ ದತ್ ಮುಂತಾದವರು ನನಗೆ ರೋಲ್ ಮಾಡಲೆಂದು ಹೇಳುತ್ತಾರೆ ಅರ್ಜುನ್. ಬಡತನದ ಬೇಗೆಯಲ್ಲಿ ಬೆಂದು ತನ್ನ ಅಪ್ಪನ ಆಸೆಯಂತೆ ಕುಸ್ತಿಪಟುವಾಗಿ ಸಾಧನೆ ಮಾಡಲು ಹೊರಟಿರುವ ಇವರು ಒಲಂಪಿಕ್ಸ್ ನಲ್ಲಿ ಪದಕವನ್ನು ಗೆದ್ದು ಇಡೀ ರಾಷ್ಟ್ರವೇ ಹೆಮ್ಮೆಪಡುವಂತಾಗಲಿ ಎಂದು ದೇವರಲ್ಲಿ ಪ್ರಾರ್ಥಿಸೋಣ ಗೆದ್ದು ಬಾ ಅರ್ಜುನ.



## ಹಂಪಿ ಪ್ರವಾಸದ ಅನುಭವ

ಅವಕಾಶ ನೀಡಿದ ಹಂಪಿ ಅಭಿವೃದ್ಧಿ ಪ್ರವಾಸೋದ್ಯಮ ಇಲಾಖೆಗೆ ಧನ್ಯವಾದಗಳು ನನ್ನ ತವರು ಹೊಸಪೇಟೆಯಾದ ಕಾರಣ ಬಾಲ್ಯದ 70ರ ದಶಕದಿಂದ ಹಂಪಿ ಪ್ರವಾಸ ಎಷ್ಟು ಬಾರಿ ಮಾಡಿದ್ದೇನೆಂಬುದು ಲೆಕ್ಕವಿಲ್ಲ.

70ರ ದಶಕದಲ್ಲಿ ಗಾಂಧಿಚೌಕ್ ಮುಂದಿನ ಕಾಲುವೆಯ ಹತ್ತಿರ ಹಳೆಯ ದೊಡ್ಡ ವ್ಯಾನ್ ಗಳು ಹಂಪಿಯ ಹೋಗುತ್ತಿದ್ದವು, ಬಸ್ ಗಳು ಬಹಳ ಕಡಿಮೆ, ಹೇಮಕೂಟದ ಮೇಲೆ ನಿಲ್ಲಿಸುತ್ತಿದ್ದರು, ವಿಶೇಷ ಹುಣ್ಣಿಮೆಯ ಪೂಜೆ, ಜಾತ್ರೆ ಸಮಯದಲ್ಲಿ ಸಹ ಬಸ್ ಇರದೆ, ಕಮಲಪುರಕ್ಕೆ ನಡೆದುಬಂದು ಅಲ್ಲಿಂದ ಬಸ್ ಹಿಡಿದು ಹೊಸಪೇಟೆಗೆ ಬಂದ ನೆನಪಿದೆ. ರಾಣಿ ಸ್ನಾನ ಗೃಹ ಕಮಲ ಮಹಲ್ ಕಲ್ಲು ಮುಳ್ಳಿನ ದಾರಿಯಲ್ಲಿ ಹಾಳದ ರೀತಿಯಲ್ಲಿದ್ದರೆ, ಉಗ್ರನರಸಿಂಹ,ಬಡವಿಲಿಂಗ ಬಾಳೆತೋಟದಲ್ಲಿದ್ದವು ಹಾಗೆ ವಿಜಯ ವಿಠ್ಠಲ ದೇಗುಲದ ಸಂಗೀತ ಕಂಭಗಳನ್ನು ಬಾರಿಸಿ, ಕಲ್ಲಿನ ರಥವನ್ನು ಹತ್ತಿ ಕುಳಿತು ಕೊಳ್ಳುತ್ತಿದ್ದೆವು ಈಗ ಇವುಗಳನ್ನು ಸ್ಮಾರಕಗಳನ್ನಾಗಿ ಮಾಡಿ ಸುತ್ತಲು ಬೇಲಿಹಾಕಿ ಕಾವಲುಗಾರರನ್ನು ನೇಮಿಸಿ ವಿಕೃತ ಪ್ರವಾಸಿಗರಿಂದ ರಕ್ಷಣೆ ಮಾಡಿದ್ದಾರೆ ಹಾಗೆ ಸ್ಮಾರಕಗಳ ಸುತ್ತ ಹುಲ್ಲಿನ ಹಾಸು ,ಬಣ್ಣ ಬಣ್ಣದ ಕ್ರೋಟನ್ ಗಿಡಗಳನ್ನು ಬೆಳೆಸಿ ಸುಂದರಗೊಳಿಸಿದ್ದಾರೆ ವಿರೂಪಾಕ್ಷ ದೇಗುಲದ ರಥಬೀದಿಯ ಎರಡು ಬದಿಯ ಕಲ್ಲು ಮಂಟಪದಲ್ಲಿ ಆಗ ಪೂಜಸಾಮಗ್ರಿ ಅಂಗಡಿಗಳು, ಹೋಟೆಲ್ನ ಇದ್ದವು . ಆಗ ದೂರದ ಊರುಗಳಿಂದ ಪ್ರವಾಸಿಗರು ಈಗಿನಂತೆ ಬರದೆ, ಸ್ಥಳೀಯ ಜನರು ಮತ್ತು ಅವರ ಮನೆಗೆ ಬಂದ ನೆಂಟರು ಬರುತ್ತಿದ್ದರು ಮನೆಯಿಂದ ಬುತ್ತಿ ಕಟ್ಟಿಕೊಂಡು ,ದೇವರ ದರ್ಶನ ಆದ ಮೇಲೆ ವಿರೂಪಾಕ್ಷ ದೇಗುಲದ ಎಡಭಾಗದಲ್ಲಿ ಹರಿವ ತುಂಗಭದ್ರೆಯ ನದಿ ದಡದ ದೊಡ್ಡ ಬಂಡೆಗಳ ಮೇಲೆ ಅಥವ ಪುರಂದರ ಮಂಟಪದಲ್ಲಿ ಊಟಮಾಡಿ ಹರಿವ ಹೊಳೆಯ ನೀರನ್ನು ಯಾವ ಭಯವಿಲ್ಲದೆ ಕುಡಿಯುತ್ತಿದ್ದೆವು.



ನಾವು ಹೋದ ಅಕ್ಟೋಬರ ತಿಂಗಳಿನಲ್ಲಿ ಬ್ರಿಟನ್ ದೇಶದ ವಾಕಿಂಗ್ ಗೆ ಹೆಸರಾದ ಬೆರ್ವಿಕ್ ಎಂಬ ಪುಟ್ಟ ಹಳ್ಳಿಗೆ ಬೇಟಿನೀಡಿದ್ದೇವು. River walk, sea walk, castle walk, ಅಲ್ಲಿ ಟ್ವೀಡ್ ನದಿ, ಫೆಸಿಫಿಕ್ ಸಾಗರ, ಕೋಟೆ ಈ ಮೂರು ನಡಿಗೆಯನ್ನು ಮಾಡಲು ಪ್ರವಾಸಿಗರಿಂದ ಬೆರ್ವಿಕ್ ತುಂಬಿ ತುಳುಕುತ್ತಿರುತ್ತದೆ ಈ ಹಳ್ಳಿಗೆ ಎಲ್ಲ ಅಧುನಿಕ ಸೌಲಭ್ಯ, ಸೌಕರ್ಯ ಗಳನ್ನು ಅಳವಡಿಸಿ ಪ್ರವಾಸಿಗರನ್ನು ಸೆಳೆಯುವಂತೆ ಅಲ್ಲಿನ ಸರ್ಕಾರ ಮಾಡಿದೆ, ನಾವು ಸಹ ಹತ್ತಿರದ ಹಳ್ಳಿಗಳನ್ನು ಸಿದ್ಧ ಪಡಿಸಬೇಕು.ದೂರದ ಪ್ರವಾಸಿಗರಿಗೆ ಅನುಕೂಲ ಮಾಡುವಂತೆ ಅನೇಕ ತಲೆಮಾರುಗಳಿಂದ ಹಂಪಿಯ ವಿರೂಪಾಕ್ಷ ಪಂಪಾಂಬಿಕೆ,ಇತರ ದೇವರಿಗೆ ನಡೆದು ಕೊಳ್ಳುವ ಸ್ಥಳೀಯ ಭಕ್ತರಿಗೆ ,ರಾತ್ರಿಯಲ್ಲಿ ಉಳಿಯಲು ಸುಸಜ್ಜಿತ ಯಾತ್ರಿನಿವಾಸ, ನಿರಂತರ ಅನ್ನದಾನ ವ್ಯವಸ್ಥೆ ಮಾಡಬೇಕು. ಕೆಲವು ಕುಟುಂಬಗಳು ಹಂಪಿ ಯುನಸ್ಕೋ ಸೇರುವ ಮೊದಲು ವಿರೂಪಾಕ್ಷ ಮತ್ತು ಉದ್ಯಾನ ವೀರಭದ್ರ ದೇಗುಲಗಳಲ್ಲಿ ಮದುವೆ ಮಾಡುತ್ತಿದ್ದರು, ಈಗ ಮದುವೆ ಮಾಡುವ ಅವಕಾಶ ರದ್ದುಗೊಳಿಸಿದ ಕಾರಣ ನೊಂದುಕೊಂಡಿದ್ದಾರೆ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರಕ್ಕೆ ಮನವಿ ಸಲ್ಲಿಸಬೇಕು

## ಹಂಪಿಗೆ ಈ ಸೌಲಭ್ಯಗಳ ಒದಗಿಸಿ

ಹಂಪಿಯ ಮುಖ್ಯವಾದ ಪ್ರವಾಸಿಗರ ಮತ್ತು ಸ್ಥಳೀಯ ಭಕ್ತರ ಆಕರ್ಷಣೆ ವಿರೂಪಾಕ್ಷ ದೇವಾಲಯದ ರಥಬೀದಿಯ ಮಂಟಪಗಳ ಕಾಮಗಾರಿಯನ್ನು ತ್ವರಿತವಾಗಿ ಮುಗಿಸಿ, ಮುತ್ತು, ರತ್ನ ಮಾರಾಟ ಮಾಡುವ ಚಿತ್ರಗಳನ್ನು ಬಿಡಿಸಬೇಕು ಅಥವ ಶಿಲಾ ವಿಗ್ರಹಗಳನ್ನು ಮಾಡಿ ನಿಲ್ಲಿಸಿಬೇಕು ವಿಜಯನಗರ ಸಾಮ್ರಾಜ್ಯವನ್ನು ಆಳಿದ ನಾಲ್ಕ ರಾಜವಂಶದ ರಾಜರ ಹೆಸರುಗಳ ವಂಶವೃಕ್ಷವನ್ನು ಬರೆದ ಬೋರ್ಡ್ ಹಾಳಾಗಿರುವ ಕಾರಣ ಹೊಸ ಬೋರ್ಡ್ ಬರೆದು ಎಲ್ಲರಿಗೂ ಕಾಣುವ ಹಾಗೆ ಇಡಬೇಕು ಹಾಗೆ ಪ್ರಸಿದ್ಧ ಸ್ಮಾರಕಗಳ ಮಂದೆ ದೊಡ್ಡ ಅಕ್ಷರದಲ್ಲಿ ಅದನ್ನು ನಿರ್ಮಿಸಿದ ರಾಜ, ರಾಜವಂಶ, ಕಾಲವನ್ನು ಬರೆದ ಬೋರ್ಡ್‌ಗಳನ್ನು ಹಾಕಬೇಕು ವಿರೂಪಾಕ್ಷ ದೇಗುಲದ ಹಿಂದೆ ಇರುವ ದೇಗುಲಗಳ ಮತ್ತು ಲೋಕಪಾವನ ಎಂಬ ಪುಷ್ಕರಣಿಯ ಮಾಹಿತಿ ಪ್ರವಾಸಿಗರಿಗೆ ತಿಳಿಸಬೇಕು.

ಲೋಕಪಾವನ ಪುಷ್ಕರಣಿಯ ಸುತ್ತಲು ಸುಂದರ ಮಂಟಪಗಳಿವೆ ಈಗ ಅಲ್ಲಿ ಬರೀ ತ್ಯಾಜ್ಯವನ್ನು ಹಾಕುತ್ತಾರೆ ವಿಜಯ ವಿಠ್ಠಲ, ಕಮಲ್ ಮಹಲ್ ದಸರ ದಿಬ್ಬ, ಉತ್ಖನನ ಮಾಡಿದ ಸ್ಥಳಗಳನ್ನು ನೋಡಲು ಪ್ರವಾಸಿಗರು ಪುಟ್ಟ ಮಕ್ಕಳನ್ನು ಸಹ ಕರೆದುಕೊಂಡು ಬಂದಿರುತ್ತಾರೆ ಕಾರಣ ಸ್ಮಾರಕಗಳ ಹತ್ತಿರ ಮೊಬೈಲ್ ವಿಶ್ರಾಂತಿ ಗೃಹಸ್ಥ ಶೌಚಾಲಯಗಳನ್ನು ಮಾಡಬೇಕು ನಮ್ಮ ದೇಶಿ ಕುರುಕಲು ತಿಂಡಿ, ಕುಡಿಯುವ ನೀರು, ಎಳನೀರು, ಕಬ್ಬಿನ ಹಾಲನ್ನು ನಿಗದಿ ಪಡಿಸಿದ ಬೆಲೆಯಲ್ಲಿ ಮಾರಾಟ ಮಾಡಬೇಕು ರಾಜ್ಯ ಅಂತರರಾಜ್ಯ, ವಿದೇಶಿ ಪ್ರವಾಸಿಗರಿಗೆ 3ದಿನ, 5ದಿನದ ಪ್ಯಾಕೇಜಿನ ಪ್ರವಾಸ ಸಿದ್ಧಪಡಿಸಿ ತುಂಗಭದ್ರೆಯ ಎರಡು ದಂಡೆಗಳ ನಡೆಗೆ, ಸ್ಮಾರಕಗಳ ನಡಿಗೆ, ಕಮಲಾಪುರದ ಕೆರೆಯ ನಡಿಗೆಯ ವ್ಯವಸ್ಥೆ ಮಾಡಬೇಕು.

**– ಎನ್. ಪುಷ್ಪ ಮಲ್ಲಿಕಾರ್ಜುನ,** ಹೊಸಪೇಟೆ

# ಎಚ್.ಡಿ.ಕೆ ಈಗ ಬಿಜೆಪಿಯ ವಕ್ತಾರ

## ಸಿಎಂ ಸಿದ್ದರಾಮಯ್ಯ ಹೇಳಿಕೆ | ಚುನಾವಣೆಯಲ್ಲಿ ರಾಜಕೀಯ ಲಾಭ ಪಡೆಯಲು ಬಿಜೆಪಿ ರಾಜಕೀಯ ಕುತಂತ್ರ | ಸರ್ಕಾರದ ವೈಫಲ್ಯವಲ್ಲ

**ಹಂಪಿ ಟೈಮ್ಸ್ ತುಮಕೂರು**

ಮಂಡ್ಯದ ಕೆರಗೋಡು ಗ್ರಾಮದಲ್ಲಿ ಭಗವಾಧ್ವಜ ಹಾರಿಸಿದ್ದರ ಪರವಾಗಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ ಕುಮಾರಸ್ವಾಮಿಯವರು ಪ್ರತಿಭಟನೆ ಮಾಡಲು ಹೋಗುತ್ತಾರೆ ಎಂದರೆ ಇದು ಚುನಾವಣೆಯಲ್ಲಿ ರಾಜಕೀಯ ಲಾಭ ಪಡೆಯಲು ಹಾಗೂ ಪ್ರಚೋದನೆ ನೀಡಲು ಮಾಡುತ್ತಿರುವ ರಾಜಕೀಯ ಕುತಂತ್ರ. ಇದರಲ್ಲಿ ಸರ್ಕಾರದ ವೈಫಲ್ಯ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸೋಮವಾರ ತುಮಕೂರಿನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದರು. ರಾಷ್ಟ್ರಧ್ವಜ ಅಥವಾ ಕನ್ನಡ ಧ್ವಜ ಹಾರಿಸುತ್ತೇವೆ, ಯಾವುದೇ ಧರ್ಮದ ಧ್ವಜವನ್ನು ಹಾಕುವುದಿಲ್ಲ ಎಂದು ಹೇಳಿ ಅದನ್ನು ಉಲ್ಲಂಘಿಸಿ ಭಗವಾಧ್ವಜವನ್ನು ಹಾರಿಸಿದ್ದಾರೆ. ಅವರೇ ಬರೆದುಕೊಟ್ಟ ಮುಚ್ಚಳಿಕೆಗೆ ಬರೆದುಕೊಟ್ಟಿದ್ದರ ವಿರುದ್ಧವಾಗಿ ನಡೆದುಕೊಂಡಿದ್ದಾರೆ ಎಂದರು.

ಇಬ್ಬರಿಗೆ ಲಾಠಿ ಚಾರ್ಜ್ ವೇಳೆ ಗಾಯವಾಗಿದೆ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿ ಪೋಲಿಸರಿಗೆ ಹೊಡೆದಿದ್ದಾರೆ ಎಂಬ ಮಾಹಿತಿ ಇದೆ ಪೋಲಿಸಿನವರಿಗೆ ಹೊಡೆದರೆ ಏನು ಮಾಡುತ್ತಾರೆ ಎಂದರು.

ಧ್ವಜದ ವಿಚಾರದಲ್ಲಿ ನಕಲಿ ದಾಖಲೆ ಸೃಷಿಯಾಗಿದ್ದು, ಘಟನೆಗೆ ಜಿಲ್ಲಾಧಿಕಾರಿ ಕಾರಣ, ಅವರು ಅಮಾನತು ಆಗುವವರೆಗೆ ನಾವು ಹೋರಾಟ ನಿಲ್ಲಿಸುವುದಿಲ್ಲ



ಎಂದು ಹೆಚ್.ಡಿ ಕುಮಾರಸ್ವಾಮಿಯವರು ಹೇಳಿರುವ ಬಗ್ಗೆ ಮಾತನಾಡಿ ಕುಮಾರಸ್ವಾಮಿಗೆ ಸುಳ್ಳು ಹೇಳುವುದು ಬಿಟ್ಟರೆ ಬೇರೇನು ಗೊತ್ತಿದೆ. ಅವರು ಹೇಳಿದ್ದನ್ನು ಈವರೆಗೆ ಸಾಬೀತು ಮಾಡಿದ್ದಾರೆಯೇ? ಸುಮ್ಮನೆ ಆರೋಪ ಮಾಡಬೇಕೆಂದು ಮಾಡುತ್ತಿದ್ದಾರೆ ಎಂದರು. ಕಾನೂನನ್ನು ಯಾರೇ ಕೈಗೆತ್ತಿಕೊಂಡರೆ ಸರ್ಕಾರ ಅದನ್ನು ಸಹಿಸುವುದಿಲ್ಲ ಎಂದು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದರು.

ಕುಮಾರಸ್ವಾಮಿ ಈಗ ಬಿಜೆಪಿ ವಕ್ತಾರರು ಹೆಚ್.ಡಿ ಕುಮಾರಸ್ವಾಮಿ ಅವರು ಬಿಜೆಪಿಯೊಂದಿಗೆ ಕೈಜೋಡಿಸಿರುವುದರಿಂದ ಈಗ ಬಿಜೆಪಿಯ ವಕ್ತಾರರಾಗಿದ್ದಾರೆ. ಬಿಜೆಪಿಯನ್ನು ಹಾಡಿ ಹೊಗಳುತ್ತಿದ್ದಾರೆ. ತಮ್ಮ ಪಕ್ಷದ ಹೆಸರಿನ ಜೊತೆಗೆ ಜಾತ್ಯಾತೀತ ಎಂದು ಇಟ್ಟುಕೊಂಡಿದ್ದಾರೆ. ಜಾತ್ಯಾತೀತ ಎಂದರೆ ಏನು? ಬಿಜೆಪಿ ಅವರೊಂದಿಗೆ ಸೇರಿಕೊಂಡರೆ ಇವರನ್ನು ಏನೆಂದು ಕರೆಯಬೇಕು ಎಂದರು.

ಮೊದಲು ನಡವಳಿಕೆ ಕಲಿತು ಆಮೇಲೆ ಬೇರೆಯವರಿಗೆ ಹೇಳಲಿ ಹೆಸರಿನಲ್ಲಿ ರಾಮ ಇದ್ದರೆ ಸಾಲದು ನಡವಳಿಕೆ ಸರಿಯಾಗಿರಬೇಕು ಎಂದಿರುವ ಕುಮಾರಸ್ವಾಮಿಯವರು ಮೊದಲು ನಡವಳಿಕೆ ಕಲಿತು ಆಮೇಲೆ ಬೇರೆಯವರಿಗೆ ಹೇಳಲಿ ಎಂದು ತಿರುಗೇಟು ನೀಡಿದರು.

ಕೋಮುವಿಷಯಗಳನ್ನು ಮುನ್ನೆಲೆಗೆ ತರುತ್ತಾರೆ ನಿನ್ನೆ ಚಿತ್ರದುರ್ಗದಲ್ಲಿ ಅಹಿಂದ ಸಮಾವೇಶದಿಂದಾಗಿ ಬಿಜೆಪಿಯವರಿಗೆ ಲೋಕಸಭಾ ಚುನಾವಣೆಯಲ್ಲಿ ಸೋಲುತ್ತೇವೆ ಎಂಬ ಭಯ ಹುಟ್ಟಿದೆ. ಅದಕ್ಕೆ ಈ ರೀತಿ ಹೇಳಿಕೆ ನೀಡುತ್ತಾರೆ. ಯಾವುದೇ ವಿಷಯವಿಲ್ಲದೇ ಇಲ್ಲದಲ್ಲಿ ಅಂಥ ಕಡೆ ಕೋಮುವಿಷಯಗಳನ್ನು ಮುಂದಕ್ಕೆ ತರುತ್ತಾರೆ ಎಂದರು.

ಸರ್ಕಾರ ಹೇಗೆ ಬೀಳುತ್ತದೆ ಮುಂದಿನ ಲೋಕಸಭಾ ಚುನಾವಣೆ ವೇಳೆಗೆ ಸರ್ಕಾರ ಬಿದ್ದುಹೋಗಲಿದೆ ಎಂದು ಮಾಜಿ ಸಚಿವ ಸಿ.ಟಿ.ರವಿ ಹೇಳಿಕೆ ನೀಡಿರುವ ಬಗ್ಗೆ ಮಾತನಾಡಿ ನಾವು 136 ಜನ ಗೆದ್ದಿದ್ದೇವೆ ಶೇ 43% ರಷ್ಟು ಮತಗಳು ನಮಗೆ ಬಂದಿವೆ ಹೇಗೆ ಬಿದ್ದುಹೋಗುತ್ತದೆ ಎಂದು ಮರುಪ್ರಶ್ನಿಸಿದರು. ತುಮಕೂರಿನವರೆಗೆ ಮೆಟ್ರೋ ವಿಸ್ತರಣೆಯಾಗಬೇಕೆಂದು ಗೃಹ ಸಚಿವ ಜಿ.ಪರಮೇಶ್ವರ್ ಬೇಡಿಕೆ ಇಟ್ಟುರುವ ಬಗ್ಗೆ ಪ್ರತಿಕ್ರಿಯೆ ನೀಡಿ. ಅದನ್ನು ಸಚಿವ ಸಂಪುಟದಲ್ಲಿಟ್ಟು ತೀರ್ಮಾನಿಸಲಾಗುವುದು ಎಂದರು.

# ಕಲಾ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಿ

**ಹಂಪಿ ಟೈಮ್ಸ್ ಬಳ್ಳಾರಿ**

ಮಕ್ಕಳಲ್ಲಿರುವ ಕಲಾ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಅವಶ್ಯಕತೆ ಇದೆ ಎಂದು ಛತ್ರಪತಿ ಶಿವಾಜಿ ವಿದ್ಯಾಮಂದಿರ ಪ್ರೌಢಶಾಲೆಯ ಮುಖ್ಯೋಪಧ್ಯಾಯರಾದ ಕೆ.ಕೊಟ್ರಪ್ಪ ಅವರು ಅಭಿಪ್ರಾಯಪಟ್ಟರು.

ಕರ್ನಾಟಕ ಸಂಭ್ರಮ–50 ರ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಂಡೂರು ಪಟ್ಟಣದ ಛತ್ರಪತಿ ಶಿವಾಜಿ ವಿದ್ಯಾಮಂದಿರ ಪ್ರೌಢಶಾಲೆಯ ಡಾ.ಎಂ.ವೈ. ಘೋರ್ಪಡೆ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ 'ಚಿಗುರು' ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಸಂಡೂರು ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ಜಗದೀಶ ಬಸಾಪುರ ಸೇರಿದಂತೆ ಶಿಕ್ಷಕರು, ವಿಧ್ಯಾರ್ಥಿಗಳು ಇನ್ನಿತರರು ಉಪಸ್ಥಿತರಿದ್ದರು. ನಂತರದಲ್ಲಿ ಬಳ್ಳಾರಿಯ ನಚಿಕೇತ್ ಭಟ್ ಜೋಶಿ ಅವರಿಂದ ವಾಯಲಿನ್ ವಾದನ, ದೋಣಿಮಲ್ಯೆ ಟೌನ್‌ಶಿಪ್‌ನ ಟಿ.ಸಿಂಚನರಿಂದ ಸುಗಮ ಸಂಗೀತ, ಬಳ್ಳಾರಿ ನಿಧಿ ಆರ್ಟ್ಸ್ ಟ್ರಸ್ಟ್ ವತಿಯಿಂದ ಸಮೂಹ ನೃತ್ಯ, ದೋಣಿಮಲ್ಯೆ ಡಿಟಿ ಶಿಪ್‌ನ ಎಸ್.ಕೀರ್ತನಾ ಅವರಿಂದ ಜಾನಪದ ಗೀತೆಗಳು, ಸಿರಿವಾರ ಮಲ್ಲಿಕಾರ್ಜುನ ಅವರಿಂದ ಏಕಪಾತ್ರಾಭಿನಯ (ಬಾಲಕೃಷ್ಣ ಬಯಲಾಟ), ಇಬ್ರಾಹಿಂಪುರದ ಹೆಚ್. ರಾಹುಲ್ ಸಂಗಡಿಗರಿಂದ ನಾಟಕ (ಗೌತಮಬುದ್ಧ) ಕಾರ್ಯಕ್ರಮ ಪ್ರದರ್ಶನಗೊಂಡವು.







# 30 ವರ್ಷ ಮೇಲ್ಪಟ್ಟವರು ರಕ್ತದೊತ್ತಡ, ಸಕ್ಕರೆ ಕಾಯಿಲೆ ಪರೀಕ್ಷೆ ಮಾಡಿಸಿ

**ಹಂಪಿ ಟೈಮ್ಸ್ ಬಳ್ಳಾರಿ**

ಜೀವನ ಶೈಲಿಯ ಖಾಯಿಲೆಗಳಲ್ಲಿ ಪ್ರಮುಖ ಸ್ಥಾನ ಪಡೆದಿರುವ ಸಕ್ಕರೆ ಕಾಯಿಲೆ, ರಕ್ತದೊತ್ತಡ ಪರೀಕ್ಷೆಗಳನ್ನು ನಿಯಮಿತವಾಗಿ ಮಾಡಿಸಬೇಕು. ಅದರಲ್ಲೂ 30 ವರ್ಷ ಮೇಲ್ಪಟ್ಟ ಪುರುಷ ಮತ್ತು ಮಹಿಳೆ ಪ್ರತಿ ಆರು ತಿಂಗಳಿಗೊಮ್ಮೆ ತಪ್ಪದೇ ಪರೀಕ್ಷೆ ಮಾಡಿಸಿಕೊಳ್ಳಬೇಕು. ಈ ಪರೀಕ್ಷೆಗಳನ್ನು ಆಯುಷ್ಮಾನ್ ಭವಃ ಮೇಳಗಳಲ್ಲಿ ಉಚಿತವಾಗಿ ಲಭಿಸುತ್ತವೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ ರಮೇಶ ಬಾಬು ವಿನಂತಿಸಿದ್ದಾರೆ.



ಈ ಕುರಿತು ಪ್ರಕಟಣೆ ಹೊರಡಿಸಿರುವ ಅವರು, ಆಯುಷ್ಮಾನ್ ಭವಃ ಮೇಳವು ಪ್ರತಿ ಮಂಗಳವಾರ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಜರುಗುತ್ತಿರುವ ಹಿನ್ನಲೆಯಲ್ಲಿ ಮಹಿಳೆಯರಿಗೆ ಶಿಬಿರಗಳಲ್ಲಿ ಸ್ಥನ ಕ್ಯಾನ್ಸರ್ ಪರೀಕ್ಷೆ ಹಾಗೂ ಗರ್ಭಕಂತದ ಕ್ಯಾನ್ಸರ್‌ನ ಶಂಕೀತ ಪ್ರಕರಣಗಳಲ್ಲಿ ಮೇಲ್ಮಟ್ಟದ ಆಸ್ಪತ್ರೆಗಳಿಗೆ ಕಳುಹಿಸಲು ಸೂಚಿಸಲಾಗುವುದು ಎಂದಿದ್ದಾರೆ.

**ಹೆಣ್ಣು ಭ್ರೂಣಲಿಂಗ ಪತ್ತೆ ಅಪರಾಧಕ್ಕೆ ಜೈಲು ಶಿಕ್ಷೆ:**
ಹೆಣ್ಣು ಭ್ರೂಣಲಿಂಗ ಕುರಿತು ಮಾಹಿತಿ ನೀಡುವ ವೈದ್ಯರು, ಮಾಹಿತಿ ಕೇಳುವ ಗರ್ಭಿಣಿಯ ಸಂಬಂಧಿಕರುಗಳಿಗೆ ಜೈಲುಶಿಕ್ಷೆ ಹಾಗೂ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಿದ್ದಾರೆ.

**ಆಯುಷ್ಮಾನ್ ಭವ– ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆ– ಮುಖ್ಯಮಂತ್ರಿಯ ಆರೋಗ್ಯ ಕರ್ನಾಟಕ ಯೋಜನೆ:**
ಬಿಪಿಎಲ್ ಕಾರ್ಡ್ ಹೊಂದಿದ ಕುಟುಂಬಗಳಿಗೆ ಗುಣಮಟ್ಟದ ಆರೋಗ್ಯ ಸೇವೆಯೊಂದಿಗೆ ಗಂಭೀರ ಆರೋಗ್ಯ ಸಮಸ್ಯೆಗಳಿಗೆ 5 ಲಕ್ಷದವರೆಗೆ ಉಚಿತ ಶಸ್ತ್ರಚಿಕಿತ್ಸೆಯ ಸೌಲಭ್ಯವನ್ನು ಸುಸಜ್ಜಿತ ಆಸ್ಪತ್ರೆಗಳಲ್ಲಿ ಒದಗಿಸಲು ಆಯುಷ್ಮಾನ್ ಭವ– ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆ– ಮುಖ್ಯಮಂತ್ರಿಯ ಆರೋಗ್ಯ ಕರ್ನಾಟಕ ಯೋಜನೆಯ ಕಾರ್ಡುಗಳನ್ನು ಡಿಜಿಟಲ್ ಹೆಲ್ತ್ ನಂಬರ್‌ನೊಂದಿಗೆ ಸ್ಥಳದಲ್ಲಿಯೇ ಮೊಬೈಲ್ ಮೂಲಕ ಮಾಡಿಕೊಡಲಾಗುವುದು. ಜೊತೆಗೆ ಪ್ರತಿದಿನ ಮನೆ ಬೇಟಿ ಮೂಲಕ ಆರೋಗ್ಯ ಇಲಾಖೆಯ ಸಿಬ್ಬಂದಿ ಕಾರ್ಡ್ ಮಾಡಿಕೊಡುತ್ತಿದ್ದಾರೆ. ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದ್ದಾರೆ.

**ಕ್ಷಯರೋಗ ಪರೀಕ್ಷೆ:**
ಎರಡುವಾರಕ್ಕಿಂತ ಹೆಚ್ಚು ದಿನಗಳ ಕೆಮ್ಮು ಇದ್ದಲ್ಲಿ ಕ್ಷಯರೋಗ ಪರೀಕ್ಷೆ ಹಾಗೂ ರೋಗ ಲಕ್ಷಣಗಳು ಉಳ್ಳುವರ ಕಫ ಪರೀಕ್ಷೆಯನ್ನು ಕೈಗೊಳ್ಳಲಾಗುವುದು ಮತ್ತು ಇತರ ಸಾಮಾನ್ಯ ಆರೋಗ್ಯ ಸೇವೆಗಳನ್ನು ಸಹ ಕೈಗೊಳ್ಳಲಾಗುವುದು. ಹೆಚ್ಚಿನ ಚಿಕಿತ್ಸೆ ಅಗತ್ಯ ಇರುವಂತಹ ರೋಗಿಗಳಿಗೆ ಜಿಲ್ಲಾ ಆಸ್ಪತ್ರೆ ಮತ್ತು ವಿಮ್ಸ್‌ಗೆ, ಕಳಿಸಿಕೊಡಲಾಗುವುದು. ಸಾರ್ವಜನಿಕರು ತಮ್ಮ ಆಧಾರ ಕಾರ್ಡ್, ಮೊಬೈಲ್ ಹಾಗೂ ಈ ಹಿಂದೆ ಆಸ್ಪತ್ರೆಗೆ ತೋರಿಸಿದ ಚೀಟಿಗಳನ್ನು ತಂದು ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಲು ಕೋರಿದ್ದಾರೆ.

**ರಕ್ತದಾನ ಶಿಬಿರಗಳು:**
ಆಯುಷ್ಮಾನ್ ಮೇಳಗಳಲ್ಲಿ ಗ್ರಾಮಸ್ಥರು, ಸಂಘ–ಸಂಸ್ಥೆಗಳ ಸಹಕಾರದೊಂದಿಗೆ ಗ್ರಾಮಪಂಚಾಯತ ಮಟ್ಟದಲ್ಲಿ ರಕ್ತದಾನ ಶಿಬಿರ ಏರ್ಪಡಿಸಲಾಗುತ್ತದೆ ಎಂದು ತಿಳಿಸಿದರು.

**ಅಂಗಾಂಗ ದಾನ ನೋಂದಣಿ:**
ಈಗಾಗಲೇ 3990 ಅಂಗಾಂಗ ದಾನ ನೋಂದಣಿಯನ್ನು ಮಾಡಿ ರಾಷ್ಟ್ರ ಮಟ್ಟದಲ್ಲಿ ಮುಂಚುಣಿಯಲ್ಲಿದ್ದು ಜನ ಜಾಗೃತಿಯೊಂದಿಗೆ ನೋಂದಣಿಯನ್ನು ಸಹ ಮಾಡಲಾಗುವುದು. ಶಿಬಿರದಲ್ಲಿ ಕುಟುಂಬ ಕಲ್ಯಾಣ ವಿಧಾನಗಳು, ತಾಯಿ ಮಗುವಿನ ಆರೈಕೆ, ಟೆಲಿ ಮನಸ್ ಮಾನಸಿಕ ಆರೋಗ್ಯ ಸಹಾಯವಾಣಿ 14416, ಸೊಳ್ಳೆಗಳಿಂದ ಹರಡುವ ರೋಗಗಳ ಕುರಿತು ಮಾಹಿತಿ ನೀಡಲಾಗುವುದು. ಪ್ರತಿಯೊಬ್ಬರೂ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದ್ದಾರೆ.

# ಜನರಿಗಾಗಿ ಬದುಕಿದರು ಅಂಬೇಡ್ಕರ್

ಮೊದಲ ಪುಟದಿಂದ

ಭಾಗವಾಗಲಿದ್ದಾರೆ. ಜಾಗೃತಿ ಜಾಥಾವನ್ನು ಸ್ತಬ್ಧಚಿತ್ರಗಳ ಮೂಲಕ ಪ್ರಜಾಪ್ರಭುತ್ವದ ಸಿದ್ಧಾಂತ, ಸಮಾನತೆಯ ತತ್ವ, ಸಮಾಜೋದ್ಧಾರದ ಆಕಾಂಕ್ಷೆಗಳನ್ನು ಜನರಿಗೆ ಅರಿವು ಮೂಡಿಸಲಾಗುತ್ತಿದ್ದೆ ಎಂದು ತಿಳಿಸಿದ ಅವರು, ಬಾಬಾ ಸಾಹೇಬ್ ಅಂಬೇಡ್ಕರ್ ಸೇರಿದಂತೆ ಸಂವಿಧಾನ ರಚನಾ ಸಮಿತಿ 2 ವರ್ಷ 11 ತಿಂಗಳು, 17 ದಿನಗಳ ಅವಧಿಯಲ್ಲಿ ಸುದೀರ್ಘ ಚರ್ಚೆ ನಡೆಸಿ ರಚಿಸಿದ ಲಿಖಿತ ಸಂವಿಧಾನ ನಮ್ಮದಾಗಿದೆ ಹಾಗೂ ನಮ್ಮ ಸಂವಿಧಾನ ದೇಶದ ಜನರನ್ನು ಸಶಕ್ತಗೊಳಿಸಿದೆ. ಸರ್ವರಿಗೂ ಸಮಾನತೆ, ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ನೀಡಿದೆ ಎಂದು ಹೇಳಿದರು.

ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿವಿಧ ವಾದ್ಯಗಳ ಮೂಲಕ ಡಾ.ಬಾಬ ಸಾಹೇಬ್ ಅಂಬೇಡ್ಕರ್ ಭಾವಚಿತ್ರವಿರುವ ಸಂವಿಧಾನ ಜಾಗೃತಿ ಜಾಥ ಮೆರವಣಿಗೆಯನ್ನ ಅದ್ದೂರಿಯಾಗಿ ಮಾಡಲಾಯಿತು. ಗ್ರಾಪಂ ಅಧ್ಯಕ್ಷ ಎನ್.ಕೃಷ್ಣ, ತಾಪಂ ಮಾಜಿ ಸದಸ್ಯೆ ವಿಶಾಲಾಕ್ಷಿ ರಾಜಣ್ಣ, ಗ್ರಾಪಂ ಸದಸ್ಯರಾದ ಕೆ.ಮಂಜುನಾಥ, ಸರಸ್ವತಿ, ಮುರುಳಿ ಕೃಷ್ಣ, ಬೊಮ್ಮಣ್ಣ, ಪೇಂಟ್ ತಿಪ್ಪೇಸ್ವಾಮಿ, ದಲಿತ ಸಂಘಟನೆಯ ಜಿಲ್ಲಾ ಸಂಚಾಲಕ ಮನೋಹರ ಹೆಗಡೆ, ಅಂಬೇಡ್ಕರ್ ಸಂಘದ ತಾಲೂಕು ಅಧ್ಯಕ್ಷ ಗುಣಸಾಗರ ಕೃಷ್ಣಪಪ ಮುಖಂಡರಾದ ನಾಗರಾಜ್, ಬಂಡೆ ರಾಘವೇಂದ್ರ, ಶಿವ ಪ್ರಸಾದ ಗೌಡ, ಸಮಾಜ ಕಲ್ಯಾಧಿಕಾರಿ ಜಗದೀಶ್ ದಿಗಡೂರ್, ಹುಲುಗಪ್ಪ, ಪಿಎಸ್ ಐ ಸಿ. ಪ್ರಕಾಶ್ ಸೇರಿದಂತೆ ಗ್ರಾಮಸ್ಥರು ಇದ್ದರು.

# 1983ನೇ ಬ್ಯಾಚಿನ ಸ್ನೇಹ ಸಮ್ಮಿಲನ ಕಾರ್ಯಕ್ರಮ



**ಹಂಪಿ ಟೈಮ್ಸ್ ಹರಪನಹಳ್ಳಿ**

ತಾಲೂಕು ಅರಸಿಕೆರೆ ಗ್ರಾಮದ ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 1983ನೇ ಬ್ಯಾಚಿನ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಕಾರ್ಯಕ್ರಮವನ್ನು ಕರೆಗುಡಿಹಳ್ಳಿ ಬಸವೇಶ್ವರ ದೇವಸ್ಥಾನದಲ್ಲಿ ಆಯೋಜಸಲಾಗಿತ್ತು.

ಈ ಕಾರ್ಯಕ್ರಮ ಕುರಿತು ಈ ಬ್ಯಾಚಿನ ವಿದ್ಯಾರ್ಥಿಯಾದ ಅಕ್ಷರ ಸೀಡ್ಸ್ ಕಂಪನಿ ಮಾಲಿಕರಾದ ಎನ್.ಕೊಟ್ರೇಶ್ ಮಾತನಾಡಿ ಈ ಸಮ್ಮಿಲನ ಕಾರ್ಯಕ್ರಮ ನಮಗೆ ಹಳೆಯ ದಿನಗಳನ್ನು ಈಗ ನಮ್ಮ ಕಣ್ಣು ಮುಂದೆ ತರುತ್ತದೆ, ನಮ್ಮ 40 ವರ್ಷದ ಹಳೆಯ ದಿನಗಳಿಗೆ ನಾವು ಹೋಗಿದ್ದೇವೆ, ಹಾಗೂ ನನ್ನ ಬಾಲ್ಯ ಸ್ನೇಹಿತರ ಜೊತೆಗೆ ಸೇರಿರುವುದು ನನ್ನ ಭಾಗ್ಯ, ಇನ್ನೂ ಮುಂದೆ ಪ್ರತಿ ವರ್ಷ ವಿಶಿಷ್ಟವಾದ ಕಾರ್ಯಕ್ರಮ ಮಾಡೋಣ ಎಂದು ತಿಳಿಸಿದರು.

ನಂತರ ಇದೇ ಬ್ಯಾಚಿನ ವಿದ್ಯಾರ್ಥಿಯಾದ ಡಾ.ಎಂ.ಸುರೇಶ್ ವಕೀಲರು ಮಾತನಾಡಿ ಈ ದಿನ ನಮಗೆ ಸುದಿನವಾಗಿದೆ, ನಾವು ಈ ದಿನ ವಿದ್ಯಾರ್ಥಿಗಳಾಗಿರುವಂತೆ ಬಾಸವಾಗುತ್ತದೆ,ನಮಗೆ ಈಗ ನಮ್ಮ ವಿದ್ಯಾರ್ಥಿಗಳ ಜೀವನದಲ್ಲಿ ನಡೆದ ಸಿಹಿ ಕಹಿ ನೆನಪುಗಳು ನಮ್ಮ ಕಣ್ಣು ಮುಂದೆ ಬರುತ್ತಿವೆ,ನಾವು ಅಂದು ಆಡಿದ ಕುಚೇಷ್ಟೆ,ನೋವು ನಲಿವು, ಅಂದು ಗುರುಗಳು ಮಾಡಿದ ಪಾಠ, ಒಡೆದ ಏಟುಗಳು, ಅವರು ನೀಡಿದ ಶಿಕ್ಷೆ ಅವರು ಹೇಳಿದ ಬುದ್ದಿ ಮಾತು, ಟಿವಿ ನೋಡಲು ಹೋಗಿ ಒಡೆಸಿಕೊಂಡ ಒಡೆತ ಈಗ ನೆನಪಾಯಿತು.

ಅಂದು ನಾವು ತಿಂದ ಪೆಪ್ಪರ್ ಮೆಂಟ್ ಈಗಿನ ಮಕ್ಕಳಿಗೆ ದೂರವಾಗಿವೆ,ನಾವು ನಮ್ಮ ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಸಂಸ್ಕೃತಿ ಸಂಸ್ಕಾರ, ಓಳ್ಳೆಯ ನಡತೆ, ಗುರು ಹಿರಿಯರಿಗೆ ಗೌರವ ನೀಡುವಂತ ಸಂಸ್ಕೃತಿ ನೀಡಬೇಕಾಗಿದೆ.

ನಮಗೆ ಮೊಬೈಲ್ ಇರಲಿಲ್ಲ ಎಲ್ಲಾ ಸ್ನೇಹಿತರ ಜೊತೆ ಸೇರಿ ನೋಟ್ಸ್ ಬರೆಯುತ್ತಿದ್ದೇವು, ಆದರೆ ಈಗಿನ ವಿದ್ಯಾರ್ಥಿಗಳು ಮೊಬೈಲ್ ಕೈಯಲ್ಲಿ ಹಿಡಿದುಕೊಂಡು ನೋಟ್ಸ್ ಮಾಡಿಕೊಳ್ಳುತ್ತಾರೆ,ಆದ್ದರಿಂದ ಸ್ನೇಹಿತರಿಂದ ದೂರವಾಗಿದ್ದಾರೆ. ನಮ್ಮ ಮಕ್ಕಳಿಗೆ ದೂರದ ದುಬಾರಿ ಶಿಕ್ಷಣ ನೀಡಿ ಅವರನ್ನು ಸಮಾಜದಿಂದ ದೂರ ಮಾಡುವ ಬದಲು ನಾವು ಓದಿದ ಶಾಲೆಯಲ್ಲಿ ಶಿಕ್ಷಣ ನೀಡಬೇಕು.

ಮುಂದಿನ ದಿನಗಳಲ್ಲಿ ಗುರುವಂದನಾ ಕಾರ್ಯಕ್ರಮ ಆಯೋಜನೆ ಮಾಡುವ ಕುರಿತು ಚರ್ಚೆ ಮಾಡಿ ಕಾರ್ಯಕ್ರಮ ಮಾಡೋಣ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನ ನೀಡಲಾಯಿತು.

## ಕವಿ ಮನಸು

### ಚಂದಮಾಮ



ಅಲ್ಲಿ ನೋಡು ಚಂದಮಾಮ
ಇಲ್ಲಿ ನೋಡು ಚಂದಮಾಮ
ಕಂದನ ಕೈಯನೆತ್ತಿ ತೋರಿದಳು
ನನ್ನ ಮುದ್ದಿನ ಅಮ್ಮ

ನನ್ನ ನಗಿಸಿ ತಾನು ನಕ್ಕು
ತೋರಿದಳು ಚಂದ್ರ ದಿಕ್ಕು
ತರಲೆ ಮಾಡೋ ಎನ್ನ
ಮರೆಸಿಬಿಟ್ಲು ಮುದ್ದಿನಮ್ಮ

ಚಂದ ಮಾಮ ಎಷ್ಟು ಚೆಂದ
ಚಂದಮಾಮನೆಷ್ಟು ಅಂದ
ಕೇಳೋ ನೀನು ಮುದ್ದು ಕಂದ
ಕರೆಯಲೊಡನೆ ಬರುವೆನಂದ

ಮೇಲೆ ಇರುವ ಬೆಳ್ಳಿ ತಾಟು
ನಿನಗೆಂದೇ ನಾ ತಂದುಬಿಟ್ಟು
ಊಟವನ್ನು ಅದರಲಿಟ್ಟು
ಉಣಿಸುವೆ ಕಂದ ಮಮತೆಯ ತುತ್ತು

ಹುಣ್ಣಿಮೆಯ ಚಂದಮಾಮ
ಓಡಿ ಕೆಳಗೆ ಇಳಿದು ಬರುವ
ಬಂದ ಒಡನೇ ಅವ ಉಂಡುಬಿಡುವ
ಬಾರೋ ಕಂದ ಬೇಗನೇ ಆವಾ
ಬರೋ ಮುನ್ನ ಉಂಡು ಮಲಗುವ

**– ಕೆ ಎಂ ಬಸವರಾಜ**
ನಿವೃತ್ತ ಇಂಜನಿಯರ್ ಹೊಸಪೇಟೆ




## ತುಂಗಭದ್ರಾ ನೀರಿನ ಮಟ್ಟ



| ಸೋಮವಾರ : 29-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.50 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 360 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.825 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1617.04 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8346 ಕ್ಯುಸೆಕ್ |
| ಸಾಮರ್ಥ್ಯ | 53.416 ಟಿಎಂಸಿ |

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

ಮೈಕ್ರೋ ನ್ಯೂಸ್

## ಕಲ್ಲು ಗುಂಡು ಎತ್ತುವ ಸ್ಪರ್ಧೆಗೆ ಹೆಸರು ನೋಂದಾಸಲು ಅವಕಾಶ

**ಹಂಪಿ ಟೈಮ್ಸ್ ಹೊಸಪೇಟೆ**
ಹಂಪಿ ಉತ್ಸವ–2024ರ ಪ್ರಯುಕ್ತ ಫೆ.03ರಂದು ಬೆಳಗ್ಗೆ 10 ಗಂಟೆಗೆ ಶ್ರೀವಿಜಯ ವಿದ್ಯಾರಣ ಪ್ರೌಢಶಾಲೆ ಮೈದಾನ ಹೊಸ ಮಲಪನಗುಡಿಯಲ್ಲಿ ಕಲ್ಲು ಗುಂಡು ಎತ್ತುವ ಸ್ಪರ್ಧೆ ಆಯೋಜನೆ ಮಾಡಲಾಗಿದೆ.
ಈ ಸ್ಪರ್ಧೆಗೆ ಭಾಗವಹಿಸುವ ಸ್ಪರ್ಧಾಳುಗಳು ಫೆ.03ರ ಬೆಳಗ್ಗೆ 08 ರಿಂದ 10 ಗಂಟೆಯೊಳಗೆ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಅಭ್ಯರ್ಥಿಗಳಿಗೆ ಪ್ರಥಮ ದ್ವಿತೀಯ ಮತ್ತು ತೃತೀಯ ಬಹುಮಾನ ನೀಡಲಾಗುತ್ತದೆ. ಆಸಕ್ತ ಸ್ಪರ್ಧಾಳುಗಳು ತಮ್ಮ ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ಪಾಸ್‌ಬುಕ್ ಝರಾಕ್ಸ್ ಪ್ರತಿಯೊಂದಿಗೆ ನೋಂದಾಯಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9972552385, 8217324522, 9483480101ಗೆ ಸಂಪರ್ಕಿಸಲು ತಿಳಿಸಿದೆ.
ಷರತ್ತುಗಳು: 174 ಕೆಜಿ, 155 ಕೆಜಿ, 135 ಕೆ.ಜಿ. ಈ ಮೂರು ವಿಭಾಗದಲ್ಲಿ ಕ್ರೀಡಾಕೂಟ ಏರ್ಪಡಿಸಲಾಗುವುದು., ಸಮಯದ ಆಧಾರದ ಮೇಲೆ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನವನ್ನು ಅತಿ ಹೆಚ್ಚು ತೂಕದ ಕಲ್ಲು ಗುಂಡಿನ ಮೇಲೆ ನಿರ್ಧರಿಸಲಾಗುವುದು. ಸ್ಪರ್ಧೆಗೆ 03 ಅವಕಾಶಗಳನ್ನು ನೀಡಲಾಗುವುದು. ನಿರ್ಣಾಯಕರ ತೀರ್ಪು ಅಂತಿಮವಾಗಿರುತ್ತದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಫಲಾನುಭವಿಗಳಿಗೆ ಪ್ರಮಾಣ ಪತ್ರ ವಿತರಣೆ



**ಹಂಪಿ ಟೈಮ್ಸ್ ಹೊಸಪೇಟೆ**
ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,ಆಹಾರ ಇಲಾಖೆ,ಕಲ್ಯಾಣಕರ್ನಾಟಕರಸ್ತೆ ಸಾರಿಗೆ ನಿಗಮ, ಜೆಸ್ಕಾಂ ಹಾಗೂ ಹೊಸಪೇಟೆ ತಾಲ್ಲೂಕು ಆಡಳಿತ ಇವರ ಸಹಯೋಗದಲ್ಲಿ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಾದ ಗೃಹ ಲಕ್ಷ್ಮಿಯೋಜನೆ, ಶಕ್ತಿಯೋಜನೆ, ಗೃಹಜ್ಯೋತಿ ಯೋಜನೆ ಹಾಗೂ ಅನ್ನ ಭಾಗ್ಯ ಯೋಜನೆಗಳ ಕುಂದುಕೊರತೆಕಾರ್ಯಕ್ರಮಜನವರಿ 29ರಂದು ಕಮಲಾಪುರ ಪಟ್ಟಣದಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಹೊಸಪೇಟೆ ತಹಶೀಲ್ದಾರರಾದ ವಿಶ್ವಜಿತ್ ಮೆಹ್ತಾ ಅವರು ಗ್ಯಾರಂಟಿ ಯೋಜನೆಗಳ ವಿವಿಧ ಫಲಾನುಭವಿಗಳಿಗೆ ಪ್ರಮಾಣ ಪತ್ರ ವಿತರಣೆ ಮಾಡಿದರು. ಈ ಸಂದರ್ಭದಲ್ಲಿಸಾರಿಗೆ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿದ್ಯುತ್‌ಹಾಗೂ ಆಹಾರ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಜ.31 ರಿಂದ ಫೆ.2ರವರೆಗೆ ಸಂವಿಧಾನ ಜಾಗೃತಿ ಜಾಥಾ

**ಹಂಪಿ ಟೈಮ್ಸ್ ಹೊಸಪೇಟೆ**
ಸಂವಿಧಾನ ಜಾಗೃತಿ ಜಾಥಾಕಾರ್ಯಕ್ರಮವು ಜನವರಿ31 ರಿಂದ ಫೆಬ್ರವರಿ02ರ ವರಗೆ ಹೊಸಪೇಟೆ ತಾಲ್ಲೂಕಿನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಹಶೀಲ್ದಾರ್ ವಿಶ್ವಜಿತ್ ಮೆಹ್ತಾ ತಿಳಿಸಿದ್ದಾರೆ.
ನಗರದ ತಹಶೀಲ್ದಾರ್ ಕಾರ್ಯಾಲಯದ ಸಭಾಂಗಣದಲ್ಲಿ ಇತ್ತೀಚೆಗೆ ಜರುಗಿದ ಸಂವಿಧಾನ ಜಾಗೃತಿ ಜಾಥಾದ ಕಾರ್ಯಕ್ರಮದ ತಾಲ್ಲೂಕು ಮಟ್ಟದ ಸಮಿತಿ ಸದಸ್ಯರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.
ಗಣರಾಜ್ಯೋತ್ಸವದ ಅಂಗವಾಗಿ ಜ.26 ರಿಂದ ಫೆ.23ರ ವರಗೆ ಜಿಲ್ಲಾದ್ಯಂತ ಸಂವಿದಾನ ಜಾಗೃತಿಜಾಥಾ ಕಾರ್ಯಕ್ರಮಕ್ಕೆ ಈಗಾಗಲೇ ಜಿಲ್ಲಾಉಸ್ತುವಾರಿ ಸಚಿವರು ಚಾಲನೆ ನೀಡಿದ್ದಾರೆ. ಸಂವಿದಾನ ಜಾಗೃತಿ ಜಾಥಾವು ಜ.31ಕ್ಕೆ ಹೊಸಪೇಟೆಗೆ ಆಗಮಿಸಲಿದ್ದು, ಜ.31ರಿಂದ ಫೆ.2ರವರೆಗೆ ತಾಲ್ಲೂಕಿನ ಎರಡು ಪಟ್ಟಣ ಪಂಚಾಯತಿ ಸೇರಿ ಎಲ್ಲಾ 14 ಗ್ರಾಮ ಪಂಚಾಯಿತಿಗಳಿಗೆ ಸಂಚರಿಸಲಿದೆ ಎಂದರು.
ಸಭೆಯಲ್ಲಿ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ಪೊಲೀಸ್ ಉಪ ಅಧೀಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಶು ಅಭಿವೃದ್ಧಿ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳು, ಅಲ್ಪ ಸಂಖ್ಯಾತರ ಕಲ್ಯಾಣಾಧಿಕಾರಿಗಳು ಮತ್ತು ಸಮಾಜ ಕಲ್ಯಾಣ ಇಲಾಖಾ ಅಧಿಕಾರಿಗಳು ಉಪಸ್ಥಿತರಿದ್ದರು.

# ದೇಶದ ರಕ್ಷಣೆಗೆ ಹೆಣ್ಣುಕೂಡ ಸಮರ್ಥಳು

### ಶಾಸಕ ಡಾ. ಎನ್.ಟಿ. ಶ್ರೀನಿವಾಸ್ ಹೇಳಿಕೆ | ಪಾಳೆಯಗಾರರು ಹಾಗೂ ಒನಕೆ ಒಬವ್ವ ಕುರಿತು ಉಪನ್ಯಾಸ

**ಹಂಪಿ ಟೈಮ್ಸ್ ಕೂಡ್ಲಿಗಿ**
ಗುಡೇಕೋಟೆ ಪಾಳೆಯಗಾರರ ನೆಲೆ ಬೀಡನ್ನು ರಾಜ್ಯ ಮಟ್ಟದಲ್ಲಿ ಅಚ್ಚಳಿಯದೆ ಉಳಿಯುವಂತೆ ಮಾಡುವೆ ಎಂದು ಶಾಸಕ ಡಾ. ಎನ್.ಟಿ. ಶ್ರೀನಿವಾಸ್ ಹೇಳಿದರು.



ತಾಲೂಕಿನ ಗುಡೇಕೋಟೆ ಗ್ರಾಮದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜು ವತಿಯಿಂದ ಗುಡೇಕೋಟೆ ಪಾಳೆಯಗಾರರು ಹಾಗೂ ಒನಕೆ ಒಬವ್ವ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.
ದೇಶ ರಕ್ಷಣೆಗೆ ಕೇವಲ ಗಂಡಷ್ಟೇ ಸಮರ್ಥನಲ್ಲ ಹೆಣ್ಣು ಕೂಡ ಸಮರ್ಥಳು ಎಂದು ತೋರಿಸಿಕೊಟ್ಟ ದಿಟ್ಟ ಮಹಿಳೆಯ ಊರೆಂದರೆ ಒನಕೆ ಓಬವ್ವನ ತವರೂರು ಗುಡೇಕೋಟೆ. ಗುಡೇಕೋಟೆಯು ಇಂಥಹ ಐತಿಹಾಸಿಕ ಹಿನ್ನೆಲೆ ಹೊಂದಿರುವುದರಿಂದ ರಾಷ್ಟ್ರಮಟ್ಟದಲ್ಲಿ ಗುರುತಿಸಲ್ಪಡುವಂತೆ ಅಭಿವೃದ್ಧಿಪಡಿಸಿ ಪ್ರವಾಸಿ ತಾಣವನ್ನಾಗಿ ಮಾಡಲಾಗವುದು, ಈ ಕುರಿತು ಸಚಿವರೊಂದಿಗೆ ವಿಸ್ತೃತ ಚರ್ಚೆ ಮಾಡಿದ್ದು, ಅವರು ಸಹ ಭರವಸೆ ನೀಡಿದ್ದಾರೆ. ಈ ಭಾಗದ ಬಹು ದಿನಗಳ ಬೇಡಿಕೆಯಾದ ಗುಡೇಕೋಟೆ ಉತ್ಸವವನ್ನು ಸರ್ಕಾರದ ವತಿಯಿಂದ ಪ್ರತಿ ವರ್ಷ ಆಚರಣೆ ಮಾಡಲು ಸಹ ಸಚಿವರು ಒಪ್ಪಿದ್ದು, ಈ ಬಾರಿ ಅದ್ದೂರಿಯಾಗಿ ಆಚರಣೆ ಮಾಡಲು ಸಕಲ ಏರ್ಪಾಡುಗಳನ್ನು ಮಾಡಲಾಗುವುದು ಎಂದು ತಿಳಿಸಿದರು. ಗುಡೇಕೋಟೆ ಹೋಬಳಿಯಲ್ಲಿ ಎಸ್ಸಿ, ಎಸ್ಟಿ ಪಂಗಡದ ಜನರೇ ಹೆಚ್ಚಾಗಿ ವಾಸಿಸುತ್ತಿದ್ದು ಈ ವಿಧ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಕೆಪಿಎಸ್ ಶಾಲೆಯ ಬಗ್ಗೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಜೊತೆ ಚರ್ಚಿಸಿದ್ದೇನೆ. ಶೀಘ್ರದಲ್ಲೇ ಅಗತ್ಯ ಸೌಲಭ್ಯಗಳನ್ನು ನೀಡಿ ಕರ್ನಾಟಕ ಪಬ್ಲಿಕ್ ಶಾಲೆಗೆ ಬಲ ತುಂಬುವೆ ಎಂದು ತಿಳಿಸಿದರು. ಅದರಂತೆ ಐಟಿಐ ಕಾಲೇಜು ಸೇರಿದಂತೆ ವಸತಿ ನಿಲಯಗಳು ಹಾಗೂ ವಸತಿ ಶಾಲೆಗಳಿಗೆ ಆದ್ಯತೆಯ ಮೇಲೆ ಮಂಜೂರು ಮಾಡಿಸಿ ಶೈಕ್ಷಣಿಕವಾಗಿ ಈ ಹೋಬಳಿಯನ್ನು ಅಭಿವೃದ್ಧಿ ಪಡಿಸಲು ಯೋಜನೆ ರೂಪಿಸಿದ್ದು ಈ ಎಲ್ಲಾ ಅಭಿವೃದ್ಧಿ ಕಾರ್ಯಕ್ಕೆ ಸರ್ವರ ಸಹಕಾರ ಅತ್ಯಗತ್ಯ ಎಂದು ಮನವಿ ಮಾಡಿದರು. ಹಂಪಿ ಕನ್ನಡ ವಿಶ್ವವಿದ್ಯಾಲಯ ಕುಲಪತಿ ಡಿ.ವಿ.ಪರಮಶಿವಮೂರ್ತಿ, ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಾಧ್ಯಾಪಕ ವಿರೂಪಾಕ್ಷಿ ಪೂಜಾರಹಳ್ಳಿ, ಓನಕೆ ಓಬವ್ವ ಅಧ್ಯಯನ ಪೀಠದ ಸಂಚಾಲಕ ಎ.ಶ್ರೀಧರ, ಗ್ರಾಪಂ ಅಧ್ಯಕ್ಷ ಎನ್.ಕೃಷ್ಣ, ಗುಡೇಕೋಟೆ ಸರ್ಕಾರಿ ಜೂನಿಯರ್ ಕಾಲೇಜಿನ ಪ್ರಾಚಾರ್ಯ ಎಂ.ಟಿ.ಗಿರೀಶ್, ಉಪನ್ಯಾಸಕ ನಾಗರಾಜ್ ಕೊಟ್ರಪ್ಪನವರ್ ಸೇರಿದಂತೆ ಗ್ರಾಮಸ್ಥರು, ವಿಧ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

# 10 ದಿನ ಉದ್ಯಮಶೀಲತಾ ತರಬೇತಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**
ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ಇವರ ಪ್ರಾಯೋಜಕತ್ವದಲ್ಲಿ ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ(ಸಿಡಾಕ್)ದ ವತಿಯಿಂದ ಸ್ವಂತ ಉದ್ಯೋಗ ಸ್ಥಾಪಿಸಲು ಇಚ್ಚಿಸುವವರಿಗಾಗಿ 10 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಹಮ್ಮಿಕೊಳ್ಳಲಾಗುತ್ತಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.
ತರಬೇತಿ ಕಾರ್ಯಕ್ರಮವನ್ನು ಫೆಬ್ರುವರಿ ಮೂರನೇ ವಾರದಲ್ಲಿ ಹಮ್ಮಿಕೊಳ್ಳಲಾಗುತ್ತದೆ. ತರಬೇತಿಯಲ್ಲಿ ಸ್ವಂತ ಉದ್ಯಮವನ್ನು ಸ್ಥಾಪಿಸಲು ಅನುಸರಿಸಬೇಕಾದ ಕ್ರಮಗಳು, ಸರ್ಕಾರದ ಸ್ವಂತ ಉದ್ಯೋಗ ಯೋಜನೆಗಳು, ಬ್ಯಾಂಕಿನ ವ್ಯವಹಾರ, ಮಾರುಕಟ್ಟೆ ಸಮೀಕ್ಷೆ, ಯೋಜನಾ ವರದಿ ತಯಾರಿಕೆ, ಹಾಗೂ ಉದ್ಯಮ ನಿರ್ವಹಣೆ, ಇತ್ಯಾದಿ ವಿಷಯಗಳ ಕುರಿತು ತರಬೇತಿಯನ್ನು ನೀಡಲಾಗುವುದು. ಬಳ್ಳಾರಿ ಜಿಲ್ಲೆಯ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.
ಅಭ್ಯರ್ಥಿಗಳು 18 ವರ್ಷ ದಿಂದ 45 ವರ್ಷ ವಯಸ್ಸಿನವರಾಗಿರಬೇಕು. ಓದಲು/ಬರೆಯಲು ಬರುತ್ತಿರಬೇಕು. ಮಹಿಳೆಯರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದವರಿಗೆ ಆದ್ಯತೆ ನೀಡಲಾಗುವುದು. ಅರ್ಜಿಗಳನ್ನು ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರದ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಪಡೆಯಬಹುದು ಅಥವಾ ದೂರವಾಣಿ ಸಂಖ್ಯೆಯ ಮೂಲಕ ನೊಂದಾಯಿಸಿಕೊಳ್ಳಬಹುದು. ಅರ್ಜಿ ಸಲ್ಲಿಸಲು ಫೆ.07 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೈಗಾರಿಕಾ ಕೇಂದ್ರದ ಕಚೇರಿ ಕಟ್ಟಡದ ಸಿಡಾಕ್‌ನ ಜಂಟಿ ನಿರ್ದೇಶಕರ ಕಚೇರಿ ಅಥವಾ ಮೊ.7483538942/ 9449226221 ಗೆ ಸಂಪರ್ಕಿಸಬಹುದು ಎಂದು ಕರ್ನಾಟಕ ಉದ್ಯಮ ಶೀಲತಾ ಅಭಿವೃದ್ಧಿ ಕೇಂದ್ರದ ಜಂಟಿ ನಿರ್ದೇಶಕ ಸೋಮಶೇಖರ್ ತಿಳಿಸಿದ್ದಾರೆ.

# ಜ.30ರಂದು ವಿಶೇಷ ಅಂಚೆ ಲಕೋಟೆ ಬಿಡುಗಡೆ

**ಹಂಪಿ ಟೈಮ್ಸ್ ಬಳ್ಳಾರಿ**
ಕೇಂದ್ರ ಅಂಚೆ ಇಲಾಖೆ ಮತ್ತು ಕರ್ನಾಟಕ ವೃತ್ತ ಹಾಗೂ ಅಂಚೆ ಅಧೀಕ್ಷಕರವರ ಕಚೇರಿ ಬಳ್ಳಾರಿ ವಿಭಾಗ ಇವರ ಸಂಯಕ್ತಾಶ್ರಯದಲ್ಲಿ ಜ.30ರಂದು ಶ್ರೀಮತಿ ಬಸವರಾಜೇಶ್ವರಿ ರವರ ಜನ್ಮ ಶತಮಾನೋತ್ಸವ ಮತ್ತು ಶ್ರೀ ಕುಮಾರಸ್ವಾಮಿ ದೇವಾಲಯ, ಸಂಡೂರು ಕುರಿತು ಎರಡು ವಿಶೇಷ ಅಂಚೆ ಲಕೋಟೆಗಳನ್ನು ಬಿಡುಗಡೆ ಕಾರ್ಯಕ್ರಮವನ್ನು ಜ.30 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಬಿ.ಪಿ.ಎಸ್.ಸಿ ಶಾಲೆಯ ಶರಣ ಸಭಾಂಗಣದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

# ಸಂವಿಧಾನದ ಜಾಗೃತಿ ಅನಿವಾರ್ಯ

### ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ.ಮೋಹನ್ ದಾಸ್.ಕೆ ಹೇಳಿಕೆ

**ಹಂಪಿ ಟೈಮ್ಸ್ ಬಳ್ಳಾರಿ**
ಭಾರತ ಸ್ವಾತಂತ್ರ್ಯ ಪಡೆದು 75 ವರ್ಷಗಳಾದ ನಂತರ ಸಂವಿಧಾನದ ನೈಜ ಆಶಯಗಳ ಕುರಿತು ಜಾಗೃತಿ ಮೂಡಿಸಬೇಕಾದ ಅನಿವಾರ್ಯತೆ ನಮಗೆ ಎದುರಾಗಿದೆ ಎಂದು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಮೋಹನ್ ದಾಸ್.ಕೆ ಅವರು ಹೇಳಿದರು.




ಸಮಾಜ ಕಲ್ಯಾಣ ಇಲಾಖೆ ಮತ್ತು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ವಿದ್ಯಾರ್ಥಿ ಕಲ್ಯಾಣ ಘಟಕ ಇವರ ಸಂಯುಕ್ತಾಶ್ರಯದಲ್ಲಿ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಡಾ.ಬಿ.ಆರ್.ಅಂಬೇಡ್ಕರ್ ಸಭಾಂಗಣದಲ್ಲಿ ಏರ್ಪಡಿಸಿದ್ದ 'ಸಂವಿಧಾನ ಜಾಗೃತಿ ಜಾಥ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು. ದೇಶಕ್ಕೆ ಸ್ವಾತಂತ್ರ್ಯ ಹೇಗೆ ಸುಲಭವಾಗಿ ಲಭಿಸಲಿಲ್ಲವೋ, ಸಂವಿಧಾನವೂ ಸುಲಭವಾಗಿ ಸಿಕ್ಕಿಲ್ಲ. ಅಂಬೇಡ್ಕರ್ ಅವರು ಸಂವಿಧಾನ ಕರಡು ರಚನಾ ಸಮಿತಿ ಅಧ್ಯಕ್ಷರಾದ ಬಳಿಕ ಇಂಗ್ಲೇಂಡ್, ಫ್ರಾನ್ಸ್, ಐರ್ಲ್ಯಾಂಡ್, ಕೆನಡಾ, ರಷ್ಯಾ ಜಪಾನ್ ಮತ್ತು ಆಸ್ಟ್ರೇಲಿಯಾ ರಾಷ್ಟ್ರಗಳ ಸಂವಿಧಾನ ಅಧ್ಯಯನ ಮಾಡಿ 141 ದಿನಗಳಲ್ಲಿ ಕರಡು ಸಮಿತಿಗೆ ಕರಡು ಪ್ರತಿಯನ್ನು ಸಲ್ಲಿಸುತ್ತಾರೆ. ಎರಡು ವರ್ಷ 11 ತಿಂಗಳ 18 ದಿನಗಳ, 20 ಸಾವಿರ ಪುಟಗಳ ಕರಡು ಪ್ರತಿಯಲ್ಲಿರುವ ಅಂಶಗಳನ್ನು ಚರ್ಚೆಗೆ ಒಳಪಡಿಸಿದ ಬಳಿಕ ಸಮಾನತೆ, ಸಮಬಾಳು ಮತ್ತು ಸಮಪಾಲಿನ ಆಧಾರದ ಮೇಲೆ ರಚಿಸಲಾಗಿರುವ ಕರಡು ಸಂವಿಧಾನವಾಗಿ ಅಂಗೀಕರಿಸಲಾಯಿತು ಎಂದು ಸಂವಿಧಾನ ರಚನೆಯ ಕುರಿತು ವಿವರಿಸಿದರು.
ಸಂವಿಧಾನವು ಪೂಜ್ಯನೀಯ ಗ್ರಂಥವಾಗಿದ್ದು, ಸಂವಿಧಾನದ ಮಹತ್ವ ಹಾಗೂ ಮೌಲ್ಯದ ಕುರಿತು ಅರಿವು ಮೂಡಿಸುವುದು ಇಂದು ಅನಿವಾರ್ಯವಾಗಿದೆ. ನಮ್ಮ ದೇಶವು ಇಂದು ಯಾವುದೇ ಧರ್ಮಗ್ರಂಥಗಳ ತತ್ವದ ಮೇಲೆ ನಡೆಯುತ್ತಿಲ್ಲ. ಬದಲಿಗೆ ಸಂವಿಧಾನದ ಆಶಯಗಳ ಮೇಲೆ ನಡೆಯುತ್ತಿದೆ. ಅಂತಹ ಅದ್ಭುತವಾದ ಸಂವಿಧಾನ ನೀಡಿದ ಶ್ರೇಯಸ್ಸು ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ. ಮಾಧ್ಯಮಗಳು ಸಹ ಇಂದು ಸಂವಿಧಾನ ಸ್ಥಿತಿಗತಿಗಳ ಕುರಿತಾಗಿ ಎಚ್ಚರಿಸುತ್ತಿವೆ. ದೇಶದ ಜನತೆಗೆ ಸಂವಿಧಾನ ನೀಡಿರುವ ಹಕ್ಕುಗಳ ಅರಿವು ಮೂಡಿಸಲು ಸಂವಿಧಾನ ಅರ್ಥ ಮಾಡಿಕೊಳ್ಳಬೇಕು. ಸಂವಿಧಾನವನ್ನು ಅರ್ಥಮಾಡಿಕೊಳ್ಳುವ ಸಮಯ ನಮಗೆ ಸರ್ಕಾರವು ಒದಗಿಸಿದೆ ಎಂದು ಹೇಳಿದರು.
ವಿವಿಯ ಕುಲಸಚಿವರಾದ ರುದ್ರೇಶ.ಎಸ್.ಎನ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಭಾರತಸಂವಿಧಾನವುನಮ್ಮಧರ್ಮಗ್ರಂಥವಿದ್ದಂತೆ, ಅದನ್ನು ಪವಿತ್ರವಾಗಿ ಕಾಣಬೇಕು. ಸಂವಿಧಾನದ ಚೌಕಟ್ಟಿನಡಿ ಎಲ್ಲರೂ ಸಮಾನರು ಎಂಬ ತತ್ವ ಸಾರಿದವರು ಡಾ. ಅಂಬೇಡ್ಕರ್ ಅವರು. ಸಂವಿಧಾನದ 14 ರಿಂದ 19 ಆರ್ಟಿಕಲ್‌ಗಳು ನಮ್ಮ ಜ್ಞಾನ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ. ಸಾಮಾನ್ಯ ಪ್ರಜೆಯಾದ ದೇಶದ ಅತ್ಯುನ್ನತ ಸ್ಥಾನ ಅಲಂಕರಿಸಲು ಸಂವಿಧಾನವೇ ಕಾರಣ ಎಂದು ತಿಳಿಸಿದರು.
ವಿಶ್ವವಿದ್ಯಾಲಯದ ಪ್ರಭಾರ ಕುಲಪತಿಗಳಾದ ಪ್ರೊ.ಅನಂತ ಎಲ್ ಝುಂಡೇಕರ್ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂವಿಧಾನವು ಪ್ರತಿಯೊಬ್ಬ ಮನುಷ್ಯನ ಜ್ಞಾನ, ಸಮಾನತೆ, ಸ್ವಾತಂತ್ರ ಮತ್ತು ನ್ಯಾಯಾಂಗವನ್ನು ಒಳಗೊಂಡಿದೆ. ಸಂವಿಧಾನ ಮಹಿಳೆಯರಿಗೆ ಹಲವಾರು ಸ್ಥಾನಮಾನಗಳನ್ನು ನೀಡಿದೆ. ಸರ್ಕಾರದ ಈ ಸಂವಿಧಾನದ ಅರಿವು ಮೂಡಿಸುವ ಕಾರ್ಯವು ಶ್ಲಾಘನೀಯವಾಗಿದೆ ಎಂದರು.
ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಸತೀಶ್ ಕೆ.ಹೆಚ್ ಅವರು, ವಿದ್ಯಾರ್ಥಿಗಳಿಗೆ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಸಂವಿಧಾನದ ಪೀಠಿಕೆಯ ಪ್ರತಿಜ್ಞಾ ವಿಧಿಯನ್ನು ಸಾಮೂಹಿಕವಾಗಿ ಬೋಧಿಸಿದರು.
ಸಂವಿಧಾನ ಜಾಗೃತಿ ಜಾಥಾ ಸ್ತಬ್ಧಚಿತ್ರದ ಮೆರವಣಿಗೆಯನ್ನು ಡೊಳ್ಳು ಬಾರಿಸುವ ಮೂಲಕ ಬರಮಾಡಿಕೊಳ್ಳಲಾಯಿತು. ಸಂವಿಧಾನ ಪೀಠಿಕೆ ವಾಚನ, ನ್ಯಾಯ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕುರಿತಾದ ಅಂಶಗಳನ್ನು ವೀಕ್ಷಣೆ ಮಾಡಲಾಯಿತು.
ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಾದ ಪ್ರೊ. ರಮೇಶ ಓ ಓಲೇಕಾರ್, ಹಣಕಾಸು ಅಧಿಕಾರಿಗಳಾದ ಪ್ರೊ. ಸದ್ಯೋಜಾತಪ್ಪ, ವಿದ್ಯಾರ್ಥಿ ಕಲ್ಯಾಣ ಘಟಕದ ನಿರ್ದೇಶಕ ಡಾ.ಶಶಿಕಾಂತ್ ಎಚ್ ಮಜಗಿ, ದೈಹಿಕ ಶಿಕ್ಷಣ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಶಶಿಧರ ಕೆಲ್ಲೂರ್ ಸೇರಿದಂತೆ ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಸಂಯೋಜಕರು, ಬೋಧಕರು, ಸಂಶೋಧನಾ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ, ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಹಂಪಿ ಉತ್ಸವ ಊಟೋಪಚಾರ ಮೇಲ್ವಿಚಾರಣೆಗೆ ಅಧಿಕಾರಿಗಳ ನಿಯೋಜನೆ: ಡಿಸಿ ಎಂ.ಎಸ್. ದಿವಾಕರ

**ಹಂಪಿ ಟೈಮ್ಸ್ ಹೊಸಪೇಟೆ**
ಹಂಪಿ ಉತ್ಸವದಲ್ಲಿ ಭಾಗವಹಿಸುವ ಗಣ್ಯರು, ಕಲಾವಿದರು, ಅತಿಥಿಗಳು, ರಕ್ಷಣಾ ಸಿಬ್ಬಂದಿ ಹಾಗೂ ಕಾರ್ಯನಿರತ ಸಿಬ್ಬಂದಿಗಳಿಗೆ ಮಾಡಬೇಕಾಗಿರುವ ಊಟೋಪಚಾರದ ವ್ಯವಸ್ಥೆಯ ಮೇಲ್ವಿಚಾರಣೆಗೆ ಅಧಿಕಾರಿಗಳನ್ನು ನಿಯೋಜನೆ ಮಾಡಿ, ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಆದೇಶ ಹೊರಡಿಸಿದ್ದಾರೆ.
ಮೇಲ್ವಿಚಾರಣಾಧಿಕಾರಿಗಳು ಮತ್ತು ಉಸ್ತುವಾರಿ ಅಧಿಕಾರಿಗಳು ತಮಗೆ ನಿಯೋಜಿಸಿರುವ ಕರ್ತವ್ಯಗಳ ಬಗ್ಗೆ ಫೆಬ್ರವರಿ 01ರೊಳಗೆ ಸ್ಥಳಕ್ಕೆ ಭೇಟಿ ನೀಡಿ ಮೂಲಭೂತ ಸೌಕರ್ಯಗಳಾದ ಸ್ಥಳ ಸ್ವಚ್ಛತೆ, ಶಾಮಿಯಾನ, ಕುರ್ಚಿ, ಟೇಬಲ್, ನೀರು, ವಿದ್ಯುತ್ ಸಂಪರ್ಕ ಮುಂತಾದವುಗಳನ್ನು ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಿ ಸಿದ್ದಪಡಿಸಿಕೊಳ್ಳಬೇಕು.
ಗಾಯಿತ್ರಿ ಪೀಠದ ವೇದಿಕೆ ಹಿಂಭಾಗ ಜೆ.ಎಸ್.ಡಬ್ಲೂ ಪ್ರಾಯೋಜಿತ ಅಥಿತ್ಯ, ಹೋಟೆಲ್ ಮಯೂರ ಭುವನೇಶ್ವರಿ, ಗಾಯಿತ್ರಿ ಪೀಠದ ಆವರಣ ಹಾಗೂ ಕಮಲಾಪುರ ಶಾದಿ ಮಹಲ್ ಆವರಣ ಹೀಗೆ ನಾಲ್ಕು ವಿಭಾಗಗಳಲ್ಲಿ ಗಣ್ಯರು, ಕಲಾವಿದರು, ಅತಿಥಿಗಳು, ರಕ್ಷಣಾ ಸಿಬ್ಬಂದಿ ಹಾಗೂ ಕಾರ್ಯನಿರತ ಸಿಬ್ಬಂದಿಗಳಿಗೆ ಊಟೋಪಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ.
ಊಟೋಪಚಾರ ಸರಬರಾಜಿಗೆ ನೇಮಕವಾಗಿರುವ ಗುತ್ತಿಗೆದಾರರು ವೇಳಾಪಟ್ಟಿಯಂತೆ ನಿಗದಿತ ದಿನಾಂಕದೊಳಗೆ ಉತ್ಸವದ ವೇಳಾ ಪಟ್ಟಿಯಂತೆ ತಮ್ಮ ಕೇಂದ್ರೀಯ ಅಡುಗೆ ಮನೆಗಳನ್ನು ಸಜ್ಜುಗೊಳಿಸಲು ಮತ್ತು ಪರಿಕರ ಹಾಗೂ ಸಾಮಾಗ್ರಿಗಳನ್ನು ಸ್ಥಳಕ್ಕೆ ಸರಬರಾಜು ಮಾಡಿಸಲು ಕ್ರಮ ಕೈಗೊಳ್ಳಬೇಕು. ಪ್ರತಿದಿನ ಮೆನು ಪ್ರಕಾರವಾಗಿ ವಿವಿಧ ಸಮಿತಿಗಳ ವಿವಿಧ ಕಾರ್ಯಕ್ರಮಗಳಿಗೆ ಕೇಂದ್ರೀಯ ಅಡುಗೆ ಮನೆಯಲ್ಲಿ ಭಾಫೆಟ್ ಊಟವನ್ನು ಕಾರ್ಯಕ್ರಮ ನಡೆಯುವ ಸ್ಥಳಗಳಲ್ಲಾದರೆ ಊಟದ ಪೊಟ್ಟಣಗಳನ್ನು ಸರಬರಾಜು ಮಾಡಬೇಕು. ಊಟೋಪಚಾರವನ್ನು ನಿಗದಿತ ಸಮಯಕ್ಕೆ ಮಾಡಿಸಬೇಕು ಎಂದು ಪ್ರಕಟಣೆ ತಿಳಿಸಿದೆ.




**CHANGE OF NAME**

I, **LAXMIKANTHA** S/o **KALMADY KRISHNA MARAKAL** R/o Door No.1061, Sri Nisarga Nilaya, 35th ward, 2nd cross, Opp: All Inida Radio, Hosapete-583201, Vijayanagar Dist.
I have Changed my Name as **LAXMIKANTH (New Name)** Instead of **Laxmikantha** (Old Name) Sworn Before Notary K.SURABHI DURGA at HOSAPETE vide Affidavit on 29/01/2024

**AFFIDAVIT**

I, **ALTAF S** S/o Gousebasha S, 25th Ward, Ambedkar Nagar Hospet-583201., Karnataka.

My name is in Adhar Card as **ALTAF S** and in Bank account my name is as **ALTAF** the above both names are same and belongs to me only. vide affidavit dated 29-01-2024 before Notary T.Hanumantha at Hosapete-583201

**ಸಹಕಾರ ಚುನಾವಣಾ ಅಧಿಕಾರಿಗಳು ಹಾಗೂ ಸಹಕಾರಿ ಸಂಘಗಳ ಜಂಟಿ ನಿಬಂಧಕರು ಕಲಬುರಗಿ ಪ್ರಾಂತ, ರಾಯಚೂರು ಇವರ ಆದೇಶ ಸಂಖ್ಯೆ: ಸಂ.ನಿರಾ/ವಿ–8/ಚುನಾವಣೆ/ರಿಆನೇ/ಬ.ಜಿ/2023–24**

**ಚುನಾವಣಾ ನೋಟೀಸು**

ಹೊಸಪೇಟೆ ತಾಲೂಕು ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘ ನಿ., ಹೊಸಪೇಟೆ ಇದರ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ಡಿ.ವೀರೇಶ ಮಾವಿನಹಳ್ಳಿ ಇವರ ಮಳಿಗೆ ಕುರುಬರ ಸಂಘ ಹೊಸಪೇಟೆ ಕಟ್ಟಡದಲ್ಲಿ ದಿನಾಂಕ: 10–02–2024 ಶನಿವಾರ ಬೆಳಿಗ್ಗೆ 9–00 ಗಂಟೆಯಿಂದ ಸಾಯಂಕಾಲ 4–00 ಗಂಟಡೆಯವರೆಗೆ ಮೀಸಲಿರಿಸಿದ ಹಿಂದುಳಿದ ವರ್ಗ ಪ್ರವರ್ಗ–ಎ–01 ಸ್ಥಾನ, / ಹಿಂದುಳಿದ ವರ್ಗ ಪ್ರವರ್ಗ–ಬಿ–01 ಸ್ಥಾನ/ ಮಹಿಳಾ–02 ಸ್ಥಾನಗಳು / ಪರಿಶಿಷ್ಠ ಜಾತಿ –01/ ಪರಿಶಿಷ್ಟ ಪಂಗಡ–01 ಸ್ಥಾನ ಮತ್ತು ಸಾಮಾನ್ಯ –08 ಸ್ಥಾನಗಳು, ಒಟ್ಟು 14 ಸ್ಥಾನಗಳಿಗಾಗಿ ಮೀಸಲಿಟ್ಟ ಮತಕ್ಷೇತ್ರಗಳಿಗೆ ನಡೆಸಲಾಗುವುದೆಂದು ನೋಟೀಸು ನೀಡಲಾಗಿದೆ. ಆಕಾಂಕ್ಷೆಯುಳ್ಳ ಅಭ್ಯರ್ಥಿಗಳಿಂದ ನಾಮ ಪತ್ರ ಪಡೆಯಲು ಕೊನೆಯ ದಿನಾಂಕ: 27–01–2024 ರಿಂದ 02–02–2024 ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 3–00 ಗಂಟೆವರೆಗೆ, ಸ್ಥಳ: ಮಳಿಗೆ ಕುರುಬರ ಸಂಘದ ಹೊಸಪೇಟೆ ಕಟ್ಟಡದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ ಸಲ್ಲಿಸಬೇಕು.
ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರೀಶೀಲನೆ ದಿನಾಂಕ: 03–02–2024., ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ: 03.02.2024., ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಂದ ನಾಮಪತ್ರಗಳ ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ: 04–02–02024., ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ ದಿನಾಂಕ: 04–02–2023., ಚುನಾವಣೆ ಅವಶ್ಯವಿದ್ದಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ ಅಭ್ಯರ್ಥಿಗಳ ಚಿಹ್ನೆಗಳ ಹಂಚಿಕೆ ದಿನಾಂಕ: 04–02–2024., ಚಿಹ್ನೆಯ ಸಹಿತ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ ದಿನಾಂಕ: 06–02–2024., ಮತದಾನ ದಿನಾಂಕ ಮತ್ತು ಸಮಯ: 10–02–2024, ಸಮಯ: ಬೆಳಿಗ್ಗೆ 9–00 ಗಂಟೆಯಿಂದ ಸಂಜೆ 4–00 ಗಂಟೆಯವರೆಗೆ
ಮತ ಎಣಿಕೆ ಮತ್ತು ರಿಟರ್ನಿಂಗ್ ಅಧಿಕಾರಿಯಿಂದ ಫಲಿತಾಂಶ ಘೋಷಣೆ: ದಿನಾಂಕ: 10–02–2024

**ಸಹಿ/– ರಿಟರ್ನಿಂಗ್ ಅಧಿಕಾರಿ ಹಾಗೂ**
**ದ್ವಿತೀಯ ದರ್ಜೆ ಸಹಾಯಕರು,**
**ಸಹಕಾರ ಸಂಘಗಳ ಸಹಾಯಕ ನಿಬಂಧಕರ**
**ಕಛೇರಿ, ಹೊಸಪೇಟೆ.**

ಸ್ಥಳ:ಹೊಸಪೇಟೆ
ದಿನಾಂಕ: 22–01–2024

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA